ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

# ಸಹಕಾರ ವಾರ್ತಾಪತ್ರಿಕೆ

ಸಂಪುಟ : 3 । ಸಂಚಿಕೆ : 2 ಮಾರ್ಚ್ : 2021 ಪುಟಗಳು : 20 । ಬೆಲೆ : 25/–



## ಶಿವರಾತ್ರಿ – ಶಿವಾರಾಧನೆಯ ಪರ್ವ

ಸಹಕಾರಿ ಬಂಧುಗಳಿಗೆ
ಮಹಾಶಿವರಾತ್ರಿಯ
ಶುಭಾಶಯಗಳು

ಶ್ರೀಮತಿ ಕೆ.ಲಲಿತ ಜಿ.ಟಿ.ದೇವೇಗೌಡ
ಅಧ್ಯಕ್ಷರು

ಆಡಳಿತ ಮಂಡಳಿ ಸದಸ್ಯರುಗಳು
ಕರ್ನಾಟಕ ರಾಜ್ಯ ಸಹಕಾರ
ಪತ್ತಿನ ಸಂಘಗಳ ಮಹಾಮಂಡಳ, ಬೆಂಗಳೂರು.

ಡಾ. ಬಿ.ಡಿ. ಭೂಕಾಂತ
ಉಪಾಧ್ಯಕ್ಷರು



ಪತ್ತಿನ ಮಹಾಮಂಡಳದ ನಿರ್ದೇಶಕರಾದ ಶ್ರೀ ರವೀಂದ್ರ ಪ್ರಲ್ಹಾದ ಕಲಬುರ್ಗಿರವರು ನೇಕಾರರ ಪತ್ತಿನ ಸಹಕಾರ ಸಂಘ ನಿ., ನವನಗರ ಬಾಗಲಕೋಟೆ ಇದರ ವತಿಯಿಂದ ಶಿಕ್ಷಣ ನಿಧಿಯ ಚೆಕ್ಕನ್ನು ಅಧ್ಯಕ್ಷರಾದ ಶ್ರೀಮತಿ ಕೆ.ಲಲಿತ ಜಿ.ಟಿ. ದೇವೇಗೌಡರವರಿಗೆ ನೀಡಿದರು.




ಶ್ರೀ ನಾಗೇಂದ್ರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ನಿಯಮಿತ, ಬೆಂಗಳೂರು ಇದರ ಅಧ್ಯಕ್ಷರಾದ ಶ್ರೀ ಕೆ.ರುದ್ರಪ್ಪ, ಉಪಾಧ್ಯಕ್ಷರಾದ ಶ್ರೀ ಎಂ.ಮರಿಯಪ್ಪ, ನಿರ್ದೇಶಕರಾದ ಶ್ರೀ ಶಿವಣ್ಣೇಗೌಡ, ಕಾರ್ಯದರ್ಶಿ ಶ್ರೀ ಸಿದ್ದೇಶ್ ರವರುಗಳು ಕಟ್ಟಡ ದೇಣಿಗೆಯ ಚೆಕ್ಕನ್ನು ಪತ್ತಿನ ಮಹಾಮಂಡಳದ ನಿರ್ದೇಶಕರುಗಳಾದ ಶ್ರೀ ಕೆ.ಕೆ.ಮಹೇಂದ್ರಪ್ರಸಾದ್ ಗೌಡ ಹಾಗೂ ಶ್ರೀ ಡಿ.ಚನ್ನಯ್ಯರವರಿಗೆ ನೀಡಿದರು.



ಸಂಗಮ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಬೆಂಗಳೂರು ಇದರ ಅಧ್ಯಕ್ಷರಾದ ಶ್ರೀ ಶಿವಕುಮಾರಯ್ಯ ಎಂ.ಆರ್ ಇವರು ಮಹಾಮಂಡಳಕ್ಕೆ ಕಟ್ಟಡ ದೇಣಿಗೆಯ ಚೆಕ್ಕನ್ನು ಪತ್ತಿನ ಮಹಾಮಂಡಳದ ನಿರ್ದೇಶಕರಾದ ಶ್ರೀ ಕೆ.ಕೆ. ಮಹೇಂದ್ರಪ್ರಸಾದ್ ಗೌಡರವರಿಗೆ ನೀಡಿದರು. ಸಂಘದ ಉಪಾಧ್ಯಕ್ಷರಾದ ಶ್ರೀ ಸಿದ್ದಲಿಂಗಪ್ಪ, ನಿರ್ದೇಶಕರುಗಳಾದ ಶ್ರೀ ತಾಂಡು ಮೂರ್ತಿ, ಶ್ರೀ ರುದ್ರಪ್ಪ ಎಸ್. ಶ್ರೀ ಸದಾಶಿವಯ್ಯ ಎಸ್, ಶ್ರೀ ಸಿದ್ದಬೀರಯ್ಯ ಹಾಗೂ ಶ್ರೀ ದೊಡ್ಡಲಿಂಗೇಗೌಡ, ಆಂತರಿಕ ಲೆಕ್ಕಪರಿಶೋಧಕರು ಇವರುಗಳು ಉಪಸ್ಥಿತರಿದ್ದರು.


# ಪೆಟ್ರೋಲ್, ಡೀಸೆಲ್ ಬೆಲೆ ಇಳಿಸದಿದ್ದರೆ ಆರ್ಥಿಕತೆಗೆ ಕಂಟಕ - ಶಕ್ತಿಕಾಂತ ದಾಸ್ ಎಚ್ಚರಿಕೆ

**ಹೊಸದಿಲ್ಲಿ :** ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆ ಕುರಿತು ಭಾರತೀಯ ರಿಸರ್ವ್ ಬ್ಯಾಂಕ್ ಎಚ್ಚರಿಕೆ ನೀಡಿದೆ. ಇಂಧನ ಬೆಲೆ ಏರಿಕೆಯಿಂದಾಗಿ ಎಲ್ಲ ವೆಚ್ಚ ಹೆಚ್ಚಾಗಲಿದ್ದು, ಆರ್ಥಿಕತೆಯ ಮೇಲೆ ಬಹುದೊಡ್ಡ ಪರಿಣಾಮ ಬೀರಲಿದೆ ಎಂದು ರಿಸರ್ವ್ ಬ್ಯಾಂಕ್ ಗವರ್ನರ್ ಶಕ್ತಿಕಾಂತ ದಾಸ್ ತಿಳಿಸಿದ್ದಾರೆ.

ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಗಗನಕ್ಕೇರುತ್ತಿದ್ದು, ಈ ಸಂದರ್ಭದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಮನ್ವಯವಾಗಿ ಸಂಘಟಿತ ಕ್ರಮ ತೆಗೆದುಕೊಳ್ಳಬೇಕು. ಜನಸಾಮಾನ್ಯರ ಸಂಚಾರ ಸಾರಿಗೆ ವೆಚ್ಚ ತಗ್ಗಿಸುವ ಹಿನ್ನೆಲೆಯಲ್ಲಿ ಇಂಧನ ಬೆಲೆ ತಗ್ಗಿಸುವತ್ತ ಗಮನ ಹರಿಸಬೇಕು ಎಂದು ಶಕ್ತಿಕಾಂತ್ ದಾಸ್ ಅಭಿಪ್ರಾಯಪಟ್ಟಿದ್ದಾರೆ.

ಬಾಂಬೆ ಚೇಂಬರ್ ಆಫ್ ಕಾಮರ್ಸ್‌ನ 185ನೇ ಸಂಸ್ಥಾಪನಾ ದಿನದ ಸಭೆಯಲ್ಲಿ ಮಾತನಾಡಿದ ಅವರು, ಡೀಸೆಲ್ ಮತ್ತು ಪೆಟ್ರೋಲನ್ನು ಕೇವಲ ಸಾರಿಗೆ ಉದ್ದೇಶಕ್ಕೆ ಬಳಸುವುದಿಲ್ಲ. ಇದು ಉತ್ಪಾದನಾ ವೆಚ್ಚದ ಮೇಲೂ ಪರಿಣಾಮ ಬೀರುತ್ತದೆ. ಈ ಸಂದರ್ಭದಲ್ಲಿ ಬೆಲೆಗಳ ಸಮನ್ವಯ ಹಾಗೂ ಕಡಿತದ ಅಗತ್ಯವಿದೆ ಎಂದರು.

ಕೋವಿಡ್-19 ನಂತರದಲ್ಲಿ ಕೇಂದ್ರ ಮತ್ತು ರಾಜ್ಯಗಳು ಆದಾಯದ ಕೊರತೆಯಿಂದ ತತ್ತರಿಸುತ್ತಿರುವುದು ನಿಜ. ಆದರೆ, ಹೆಚ್ಚುತ್ತಿರುವ ಇಂಧನ ಬೆಲೆಯನ್ನು ಕಡಿತಗೊಳಿಸದಿದ್ದಲ್ಲಿ ಮತ್ತೆ ಹಣದುಬ್ಬರ ಉಂಟಾಗುವ ಸಾಧ್ಯತೆಯಿದೆ ಎಂದು ಶಕ್ತಿಕಾಂತ ದಾಸ್‌ಎಚ್ಚರಿಕೆ ನೀಡಿದ್ದಾರೆ.



ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲ ಬೆಲೆ ಏರಿಕೆಯಿಂದ ಮಾತ್ರವಲ್ಲದೆ ಕೇಂದ್ರ ಮತ್ತು ರಾಜ್ಯಗಳ ಅಧಿಕ ತೆರಿಗೆಯಿಂದ ಸಹ ಇಂಧನ ಬೆಲೆ ಹೆಚ್ಚಾಗುತ್ತದೆ. ಕೇಂದ್ರವು ಒಂದು ಲೀಟರ್ ಪೆಟ್ರೋಲ್‌ಗೆ 32 ರೂಪಾಯಿ 90 ಪೈಸೆ ತೆರಿಗೆ ಮತ್ತು ಸೆಸ್ ಆಗಿ ಸಂಗ್ರಹಿಸುತ್ತದೆ. ಡೀಸೆಲ್ ಮೇಲೆ, ಸಂಚಿತ ಕೇಂದ್ರ ತೆರಿಗೆಗಳು ಮತ್ತು ಸೆಸ್ ಸೇರಿ 31 ರೂಪಾಯಿ 80 ಪೈಸೆಯಾಗುತ್ತದೆ.

ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಇಂಧನ ಬೆಲೆಗಳನ್ನು ಒಳಗೊಂಡಿರುವ ಪರೋಕ್ಷ ತೆರಿಗೆ ಮತ್ತು ಸೆಸ್ ಕಡಿತಕ್ಕೆ ಶಕ್ತಿಕಾಂತ್ ದಾಸ್ ಕರೆ ನೀಡಿದರು. ಕಳೆದ 10 ದಿನಗಳಲ್ಲಿ ಪೆಟ್ರೋಲ್, ಡೀಸೆಲ್ ಬೆಲೆ ತೀವ್ರ ಏರಿಕೆ ಕಂಡಿದ್ದು, ಕೆಲವು ರಾಜ್ಯಗಳಲ್ಲಿ ಪೆಟ್ರೋಲ್ ಪ್ರತಿ ಲೀಟರ್‌ಗೆ 100 ರೂಪಾಯಿಯಷ್ಟಾಗಿದೆ.

## ಜಾಹಿರಾತು ಮನವಿ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿ ಮಾಸಿಕ ಸಹಕಾರ ಪತ್ರಿಕೆಯನ್ನು ಪ್ರಕಟ ಮಾಡುತ್ತಿದ್ದು, ಪತ್ತಿನ ಸಹಕಾರ ಚಳವಳಿಯ ಪೂರಕ ಚಟುವಟಿಕೆಗಳಿಗೆ ಪ್ರಚಾರ ನೀಡುತ್ತಾ ಬರುತ್ತಿದೆ. ರಾಜ್ಯದ ಪತ್ತಿನ ಸಹಕಾರ ಸಂಘಗಳು ತಮ್ಮ ಕಾರ್ಯಪ್ರಗತಿಯ ವಿವರಗಳನ್ನು ಜಾಹಿರಾತು ಮೂಲಕ ಪ್ರಕಟಿಸಿದ್ದಲ್ಲಿ ಉತ್ತಮ ಪ್ರಚಾರ ಪಡೆದುಕೊಳ್ಳಲು ಸಾಧ್ಯವಿದೆ. ಈ ನಿಟ್ಟಿನಲ್ಲಿ ಪತ್ತಿನ ಸಹಕಾರ ಸಂಘಗಳ ಮಹಾಮಂಡಳವು ರಿಯಾಯಿತಿ ದರದಲ್ಲಿ ಜಾಹಿರಾತುಗಳನ್ನು ಪ್ರಕಟಿಸಲು ಉತ್ಸುಕವಾಗಿದೆ. ಸಹಕಾರ ಸಂಸ್ಥೆಗಳು ಸಂಪೂರ್ಣ ಮಾಹಿತಿಗಳೊಂದಿಗೆ ಜಾಹಿರಾತುಗಳನ್ನು ನೀಡಲು ಕೋರಿದೆ. ಜಾಹಿರಾತು ದರಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ದೂರವಾಣಿ ಹಾಗೂ ಮೊಬೈಲ್ ಸಂಖ್ಯೆಗಳಿಗೆ ಸಂಪರ್ಕಿಸಲು ಕೋರಿದೆ.




ಮೊಬೈಲ್ ನಂ. 9008407988, ದೂರವಾಣಿ : 080 23564444, 23464033, 23464034

ಇ-ಮೇಲ್ : ksccsfltd@gmail.com, info@ksccsf.org, ವೆಬ್‌ಸೈಟ್ : www.ksccsf.org

## ಸಹಕಾರ ವಾರ್ತಾ ಪತ್ರಿಕೆಗೆ ಚಂದಾದಾರರಾಗಲು ಮನವಿ

ಕರ್ನಾಟಕ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಪ್ರಕಟಿಸುತ್ತಿರುವ ಮಾಸಿಕ ಸಹಕಾರ ವಾರ್ತಾ ಪತ್ರಿಕೆಗೆ ಈಗಾಗಲೇ ಚಂದಾದಾರರಾಗಿರುವ ಸದಸ್ಯ ಸಹಕಾರ ಸಂಘಗಳನ್ನು ಹೊರತುಪಡಿಸಿ ಇನ್ನುಳಿದ ಪತ್ತಿನ ಸಹಕಾರ ಸಂಘಗಳು "ಸಹಕಾರ ಮಾಸಿಕ ವಾರ್ತಾ ಪತ್ರಿಕೆ"ಗೆ ಚಂದಾದಾರರಾಗಲು ಈ ಮೂಲಕ ಮನವಿ ಮಾಡಲಾಗಿದೆ.

**– ಸಂಪಾದಕರು**

SAHAKARA VARTHA PATHRIKE KANNADA MONTHLY
RNI-REG NO : KARKAN/2018/75796
POST REG NO : KNBGW-1816/2019-2021
POSTING DATE : 1 & 5. EVERY MONTH
POSTED AT : P/C RMS BHAVAN, BANGALORE PSO,
Blore-26 PUBLISHED ON : 28TH of Previous Month

# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಆಡಳಿತಮಂಡಳಿ


ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ
ಅಧ್ಯಕ್ಷರು


ಡಾ. ಬಿ.ಡಿ. ಭೂಕಾಂತ
ಉಪಾಧ್ಯಕ್ಷರು


ಶ್ರೀ ಸಿ.ಎಂ. ಮಾರೇಗೌಡ
ನಿರ್ದೇಶಕರು


ಶ್ರೀ ವಿ. ರಾಜು
ನಿರ್ದೇಶಕರು


ಡಾ. ಸಂಜಯ ಪಂ. ಹೊಸಮಠ
ನಿರ್ದೇಶಕರು


ಶ್ರೀ ಎಂ.ಜೆ. ನರೇಂದ್ರ ಕುಮಾರ
ನಿರ್ದೇಶಕರು


ಶ್ರೀ ಡಿ. ಚನ್ನಯ್ಯ
ನಿರ್ದೇಶಕರು


ಶ್ರೀ ಕೆ. ಕೃಷ್ಣಮೂರ್ತಿ
ನಿರ್ದೇಶಕರು


ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ
ನಿರ್ದೇಶಕರು


ಶ್ರೀ ಜಿ. ಮಲ್ಲಿಕಾರ್ಜುನಯ್ಯ
ನಿರ್ದೇಶಕರು


ಶ್ರೀ ತಮ್ಮಣ್ಣ ಬಿ. ಕೆಂಚರಡ್ಡಿ
ನಿರ್ದೇಶಕರು


ಶ್ರೀ ಧರೇಪ್ಪ ಎಂ. ಅಲಗೂರ
ನಿರ್ದೇಶಕರು


ಶ್ರೀ ಗುರುಪಾದಪ್ಪಗೌಡ ಬಿ. ಪಾಟೀಲ
ನಿರ್ದೇಶಕರು


ಶ್ರೀ ಹೊನ್ನಯ್ಯ ವಿ. ಹಿರೇಮಠ
ನಿರ್ದೇಶಕರು


ಶ್ರೀ ಪಿ.ಕೆ. ಜಯಕೃಷ್ಣೇಗೌಡ
ನಿರ್ದೇಶಕರು


ಶ್ರೀ ಶೇಖರಗೌಡ ಮಾಲಿ ಪಾಟೀಲ
ನಿರ್ದೇಶಕರು


ಶ್ರೀ ಹೆಚ್.ಟಿ. ನಾಗೇಶ್
ನಿರ್ದೇಶಕರು


ಶ್ರೀ ಡಿ.ಆರ್. ನಾಗೇಶಪ್ಪ
ನಿರ್ದೇಶಕರು


ಶ್ರೀ ಉಮೇಶ ಶಿ ಬಾಳಿ
ನಿರ್ದೇಶಕರು


ಶ್ರೀ ರವೀಂದ್ರ ಪ್ರಲ್ಹಾದ ಕಲಬುರ್ಗಿ
ನಿರ್ದೇಶಕರು


ಶ್ರೀ ಚಿತ್ತರಂಜನ್ ಬೋಳಾರ್
ನಿರ್ದೇಶಕರು


ಶ್ರೀ ಕೆ.ಎಸ್.ಗುರುಪ್ರಸಾದ್
ಸಲಹೆಗಾರರು


ಶ್ರೀಮತಿ ಪಿ.ಆಶಾಲತಾ
ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರ)

ಇಂದ : ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು
ನಂ.16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003

Printed at : Biligiri Printers
Chamrajpet, Bengaluru - 18.

## ಸಂಪಾದಕರ ನುಡಿ



ಶ್ರೀಮತಿ ಕೆ.ಲಲಿತ ಜಿ.ಟಿ.ದೇವೇಗೌಡ
ಅಧ್ಯಕ್ಷರು

"ಕಳೆದ ವರ್ಷ ಕೋವಿಡ್–19ರ ಸೋಂಕು ವಿಶ್ವದಾದ್ಯಂತ ವ್ಯಾಪಕವಾಗಿ ಹರಡಿ ಲಕ್ಷಾಂತರ ಜನರನ್ನು ಬಲಿ ತೆಗೆದುಕೊಂಡಿದೆ. ಈ ನಡುವೆ ಲಾಕ್‌ಡೌನ್ ಕಾರಣಗಳು ಮತ್ತು ಇತರೆ ಸಾಮಾಜಿಕ–ಆರ್ಥಿಕತೆಯಲ್ಲಿ ಹಿನ್ನಡೆಗಳು ಅನುಭವಿಸಿದ ಕಾರಣ ದೇಶ ವಿದೇಶಗಳ ಆರ್ಥಿಕತೆ ಕುಸಿದಿದೆ. ಕೋಟ್ಯಂತರ ಉದ್ಯೋಗಗಳು ನಷ್ಟವಾಗಿದೆ."

# ಸಹಕಾರ ಸಂಸ್ಥೆಗಳ ನೆರವಿಗೆ ಸರ್ಕಾರಗಳು ಮುಂದಾಗಲಿ




ಸಹಕಾರ ಕ್ಷೇತ್ರ ಸೇವಾ ಕ್ಷೇತ್ರವಾಗಿ ಆರಂಭಗೊಂಡು ಪ್ರಸ್ತುತ ದಿನಮಾನಗಳಲ್ಲಿ ಲಾಭ ಗಳಿಕೆಯ ಜೊತೆಗೆ ವ್ಯವಹಾರಿಕ ವಲಯವಾಗಿಯೂ ಉತ್ತಮ ಸೇವೆ ಸಲ್ಲಿಸುತ್ತಿದೆ. ಅಲ್ಪಾವಧಿ ಕೃಷಿಸಾಲ, ಹೈನುಗಾರಿಕೆ ಸೇರಿದಂತೆ ಪ್ರಮುಖ ಆದ್ಯತಾ ವಲಯಗಳಿಗೆ ರಾಜ್ಯ ಸರ್ಕಾರ ಅಪಾರ ಆರ್ಥಿಕ ನೆರವು ನೀಡಿ ಪೋಷಿಸುತ್ತಾ ಬಂದಿರುವುದು ನಮಗೆಲ್ಲಾ ತಿಳಿದಿರುವ ವಿಚಾರ.

ಕಳೆದ ವರ್ಷ ಕೋವಿಡ್–19ರ ಸೋಂಕು ವಿಶ್ವದಾದ್ಯಂತ ವ್ಯಾಪಕವಾಗಿ ಹರಡಿ ಲಕ್ಷಾಂತರ ಜನರನ್ನು ಬಲಿ ತೆಗೆದುಕೊಂಡಿದೆ. ಈ ನಡುವೆ ಲಾಕ್‌ಡೌನ್ ಕಾರಣಗಳು ಮತ್ತು ಇತರೆ ಸಾಮಾಜಿಕ–ಆರ್ಥಿಕತೆಯಲ್ಲಿ ಹಿನ್ನಡೆಗಳು ಅನುಭವಿಸಿದ ಕಾರಣ ದೇಶ ವಿದೇಶಗಳ ಆರ್ಥಿಕತೆ ಕುಸಿದಿದೆ. ಕೋಟ್ಯಂತರ ಉದ್ಯೋಗಗಳು ನಷ್ಟವಾಗಿದೆ. ಈ ನಡುವೆಯೂ ದೇಶದ ಸಹಕಾರ ಕ್ಷೇತ್ರ ಸ್ವಲ್ಪಮಟ್ಟಿಗೆ ಸುಧಾರಣೆ ಕಂಡಿದೆ ಎಂದು ಭಾವಿಸಲಾಗಿದೆಯಾದರೂ ಮುಂದಿನ ಸೆಪ್ಟಂಬರ್ ವೇಳೆಗೆ ಅದರ ಪರಿಣಾಮಗಳು ಗೋಚರವಾಗಲಿದೆ. ಸಹಕಾರ ಸಂಘಗಳ ವಾರ್ಷಿಕ ಮಹಾಸಭೆಗಳು ಸೆಪ್ಟಂಬರ್–25ರೊಳಗಾಗಿ ಮುಗಿಯುವ ಕಾರಣಗಳಿಂದ.

ಈ ನಡುವೆ ಬಹುತೇಕ ಸಹಕಾರ ಸಂಘಗಳು ಕೋವಿಡ್–19ರ ಪ್ರಧಾನ ಮಂತ್ರಿ, ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ, ಆಶಾಕಾರ್ಯಕರ್ತೆಯರಿಗೆ ಪ್ರೋತ್ಸಾಹ ಧನ ವಿತರಣೆ ಹೀಗೆ ಹತ್ತು ಹಲವು ರೀತಿಯಲ್ಲಿ ನೆರವಾಗುತ್ತಲೇ ಬಂದಿವೆ. ಆದರೆ, ಇಂದಿನ ಪರಿಸ್ಥಿತಿ ಬೇರೆಯೇ ಇದೆ. ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳು ಕೂಡ ದೇಶದ ಸಹಕಾರ ಚಳುವಳಿಯ ಸಮಗ್ರ ಆರ್ಥಿಕ ಬಲವರ್ಧನೆಗೆ ಒತ್ತು ನೀಡಬೇಕಾದ ಅನಿವಾರ್ಯತೆ ನೀಡಲಾಗಿದೆ.

ಸರ್ಕಾರಗಳು ಹಲವು ರೀತಿಯಲ್ಲಿ ನೆರವುಗಳನ್ನು ಘೋಷಿಸಿ ನೆರವು ನೀಡಿದರೆ ಸಂಘಗಳು ಉಳಿಯಲು ಸಾಧ್ಯವಾಗುತ್ತವೆ. ಕೋಟ್ಯಾಂತರ ಉದ್ಯೋಗಗಳನ್ನು ಸೃಷ್ಠಿಸಿರುವ ಸಹಕಾರ ಕ್ಷೇತ್ರದಿಂದ ಯಾರೂ ಕೂಡ ಉದ್ಯೋಗ ವಂಚಿತರಾಗಬಾರದು, ಕುಟುಂಬ ನಿರ್ವಹಣೆಯ ಜೊತೆಗೆ ಶಿಕ್ಷಣ, ಆರೋಗ್ಯ ಮೂಲ ಸೌಲಭ್ಯಗಳಿಗೆ ಒತ್ತು ನೀಡಬೇಕಿರುವ ಕಾರಣಗಳಿಂದ ಸರ್ಕಾರಗಳು ತೆರಿಗೆ ವಿನಾಯಿತಿ ಸೇರಿದಂತೆ ಹಲವು ವಿನಾಯಿತಿಗಳನ್ನು ನೀಡಬೇಕು ಎಂಬುದು ಎಲ್ಲಾ ಸಹಕಾರಿಗಳ ಒಕ್ಕೊರಲಿನ ಬೇಡಿಕೆಯಾಗಿದೆ. ಇಲ್ಲದೇ ಹೋದಲ್ಲಿ ಬಹುತೇಕ ಸಹಕಾರ ಸಂಘಗಳು ನಷ್ಟ ಅನುಭವಿಸುವವು ಎಂಬ ಆತಂಕವು ಸಹಕಾರಿಗಳಲ್ಲಿ ಮನೆ ಮಾಡಿದೆ. ಈ ಬಗ್ಗೆ ಸರ್ಕಾರಗಳು ಹೆಚ್ಚು ಗಮನ ಹರಿಸಲಿ ಎಂದು ಆಶಿಸೋಣ.

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

# ಸಹಕಾರ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

**ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು**

ನಂ. 16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್‌ರಸ್ತೆ,
ಮಲ್ಲೇಶ್ವರಂ, ಬೆಂಗಳೂರು – 560003
ದೂರವಾಣಿ ಸಂಖ್ಯೆ :
080–23564444 / 23464033 / 23464034
ಇ–ಮೇಲ್ : info@ksccsf.org
ksccsfltd@gmail.com, ವೆಬ್ : www.ksccsf.org

**ಸಂಪಾದಕ ಮಂಡಳಿ**

ಅಧ್ಯಕ್ಷರು / ಪ್ರಧಾನ ಸಂಪಾದಕರು :
**ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ**

ಉಪಾಧ್ಯಕ್ಷರು / ಕಾರ್ಯನಿರ್ವಾಹಕ ಸಂಪಾದಕರು :
**ಡಾ. ಬಿ.ಡಿ. ಭೂಕಾಂತ**

ಉಪಸಂಪಾದಕರು :
**ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್ ಗೌಡ**

ಸದಸ್ಯರು :
**ಶ್ರೀ ಕೆ. ಕೃಷ್ಣಮೂರ್ತಿ, ಶ್ರೀ ಜಿ. ಮಲ್ಲಿಕಾರ್ಜುನಯ್ಯ**
**ಶ್ರೀ ಹೆಚ್.ಟಿ. ನಾಗೇಶ್, ಶ್ರೀ ಚಿತ್ತರಂಜನ್ ಬೋಳಾರ್**

ಸಲಹೆಗಾರರು : **ಶ್ರೀ ಕೆ.ಎಸ್. ಗುರುಪ್ರಸಾದ್**

**ಶ್ರೀಮತಿ ಪಿ. ಆಶಾಲತಾ**
ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರಭಾರ)

## ಉಡುಪಿಯ ಬಡಗಬೆಟ್ಟು ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಜಿಲ್ಲಾಧಿಕಾರಿ ಕಛೇರಿಗೆ ವಾಟರ್ ಚಿಲ್ಲರ್ ಕೊಡುಗೆ




ಉಡುಪಿಯ ಜಿಲ್ಲಾಧಿಕಾರಿಯವರ ಕಛೇರಿಗೆ ಉಡುಪಿಯ ಪ್ರತಿಷ್ಠಿತ ಬಡಗಬೆಟ್ಟು ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯ ವತಿಯಿಂದ ಸುಮಾರು ರೂ.70,000/–ಮೌಲ್ಯದ ಉತ್ತಮ ಗುಣಮಟ್ಟದ ವಾಟರ್ ಚಿಲ್ಲರ್‌ನ್ನು ಸಾರ್ವಜನಿಕ ಉಪಯೋಗಕ್ಕಾಗಿ ದೇಣಿಗೆಯಾಗಿ ಸಾರ್ವಜನಿಕರು ಸದುಪಯೋಗಪಡಿಸಿಕೊಳ್ಳಲು ನೀಡಲಾಯಿತು. ಉಡುಪಿ ಜಿಲ್ಲಾಧಿಕಾರಿ ಜಿ. ಜಗದೀಶ್‌ರವರು ವಾಟರ್ ಚಿಲ್ಲರ್‌ನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಉಡುಪಿ ನಗರಾಭಿವೃದ್ಧಿ ಕೋಶದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಜನಾರ್ಧನ್, ಕುಂದಾಪುರ ಸಹಾಯಕ ಆಯುಕ್ತರಾದ ಕೆ.ರಾಜು, ಸೊಸ್ಯಾಟಿಯ ಅಧ್ಯಕ್ಷರಾದ ಸಂಜೀವ ಕಾಂಚನ್, ನಿರ್ದೇಶಕ ಪುರುಷೋತ್ತಮ್ ಪಿ ಶೆಟ್ಟಿ, ಪ್ರಧಾನ ವ್ಯವಸ್ಥಾಪಕ ಜಯಕರ ಶೆಟ್ಟಿ ಇಂದ್ರಾಳಿ, ಸಹಾಯಕ ಪ್ರಧಾನ ವ್ಯವಸ್ಥಾಪಕ ರಾಜೇಶ್ ವಿ.ಎಸ್ ಹಾಗೂ ಜಿಲ್ಲಾಧಿಕಾರಿ ಕಛೇರಿ ಅಧಿಕಾರಿಗಳು, ಸಿಬ್ಬಂದಿಗಳು ಉಪಸ್ಥಿತರಿದ್ದರು.


**ಸುಭಾಷಿತ :** 'ಭಾರತದಲ್ಲಿ ಎರಡು ಭಾರತಗಳಿವೆ. ಒಂದು ಉಳ್ಳವರ ಭಾರತ, ಇನ್ನೊಂದು ನರಳುವವರ ಭಾರತ'.
**– ಅಮರ್ತ್ಯ ಸೇನ್, ಅರ್ಥಶಾಸ್ತ್ರ ನೊಬೆಲ್ ಪ್ರಶಸ್ತಿ ಪುರಸ್ಕೃತರು**

ಸಹಕಾರ ವಾರ್ತಾ ಪತ್ರಿಕೆ ಚಂದಾದಾರರಾಗ ಬಯಸುವವರು ಚಂದಾ ಹಣವನ್ನು "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು" ಇವರ ಹೆಸರಿಗೆ ಚೆಕ್ ಅಥವಾ ಡಿಡಿಯನ್ನು ಬರೆದು ಕಳುಹಿಸಬೇಕಾಗಿ ವಿನಂತಿ. - ಸಿ.ಇ.ಒ.
ಐದು ವರ್ಷಗಳ ಚಂದಾ: ರೂ : 1500/-

**ಸೂಚನೆ :**
ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅನಿಸಿಕೆ, ಅಭಿಪ್ರಾಯಗಳು ಆಯಾ ಬರಹಗಾರರದೇ ಆಗಿರುತ್ತದೆ ವಿನಃ ಪತ್ರಿಕೆ / ಮಹಾಮಂಡಳದ ವಿಚಾರಗಳಾಗಿರುವುದಿಲ್ಲ.
- ಸಂಪಾದಕರು,
ಸಹಕಾರ ವಾರ್ತಾ ಪತ್ರಿಕೆ.

# ಸಹಕಾರಿ ಕಾಯ್ದೆ ತಿದ್ದುಪಡಿಗೆ ಚಿಂತನೆ

# ಮಾರ್ಚ್ 31ರೊಳಗೆ 24.5 ಲಕ್ಷ ರೈತರಿಗೆ 15300 ಕೋಟಿ ರೂ. ಸಾಲ ವಿತರಣೆಯ ಗುರಿ : ಸಚಿವ ಎಸ್.ಟಿ. ಸೋಮಶೇಖರ್




**ಬೆಂಗಳೂರು :** ದೇಶವ್ಯಾಪ್ತಿ ತೀವ್ರಗತಿಯಲ್ಲಿ ಹರಡಿದ ಕೋವಿಡ್ ವೈರಸ್‌ನಿಂದ ರೈತಾಪಿ ವರ್ಗವು ಸಂಕಷ್ಟದಲ್ಲಿದ್ದು ಈ ವರ್ಗದವರಿಗೆ ಕೃಷಿಗೆ ಪೂರಕವಾಗಿ ಆರ್ಥಿಕ ಸೌಲಭ್ಯವನ್ನು ಒದಗಿಸುವ ಉದ್ದೇಶದಿಂದ ಬೆಂಗಳೂರು, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ತನ್ನ ವ್ಯಾಪ್ತಿಯ ಮೂರು ಜಿಲ್ಲೆಗಳ ಹೊಸ ರೈತ ಸದಸ್ಯರಿಗೆ ನಬಾರ್ಡ್ ನಿಂದ ಮಂಜೂರಾದ ರೂ.85 ಕೋಟಿಗಳ ಕೆಸಿಸಿ ಅಲ್ಪಾವಧಿ ಬೆಳೆ ಸಾಲವನ್ನು ವಿತರಿಸಲಾಗಿದೆ ಎಂದು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ತಿಳಿಸಿದರು.

ಬೆಂಗಳೂರು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಆಯೋಜಿಸಿದ್ದ ಸಾಲ ವಿತರಣಾ ಸಮಾರಂಭದಲ್ಲಿ ಭಾಗವಹಿಸಿ ಫಲಾನುಭವಿಗಳಿಗೆ ಚೆಕ್ ವಿತರಿಸಿ ಮಾತನಾಡಿದ ಸಚಿವರು, "ಸಹಕಾರಿ ಕಾಯ್ದೆಯಲ್ಲಿ ಅವಶ್ಯವೆನಿಸಿದಲ್ಲಿ ಕಾನೂನಿಗೆ ತಿದ್ದುಪಡಿ ತರಲು ಉದ್ದೇಶಿಸಿದ್ದು, ಸಹಕಾರಿ ಸಂಘದ ಪರಿಣಿತರು ಸಲಹೆ ನೀಡಬಹುದು" ಎಂದು ಕೋರಿದರು. "ಬ್ಯಾಂಕ್ ನಿರ್ದೇಶಕರು ಅಕಾಲಿಕ ಮರಣ ಹೊಂದಿದರೆ ಎರಡೂವರೆ ವರ್ಷದೊಳಗೆ ಚುನಾವಣೆ ನಡೆಸುವ ಪ್ರಕ್ರಿಯೆ ಕೈಬಿಡಲಾಗುವುದು" ಎಂದರು.

**ಒಂದೇ ಸಾಫ್ಟ್‌ವೇರ್ :** "ಅಪೆಕ್ಸ್ ಬ್ಯಾಂಕು, ಡಿಸಿಸಿ ಬ್ಯಾಂಕ್ ಮತ್ತು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಒಂದೇ ಸಾಫ್ಟ್‌ವೇರ್ ತರುವ ಯೋಜನೆಯನ್ನು ಶೀಘ್ರ ಕೈಗೊಳ್ಳಲಾಗುವುದು. ಡಿಸಿಸಿ ಬ್ಯಾಂಕುಗಳಿಂದ ಸಕ್ಕರೆ ಕಾರ್ಖಾನೆಗಳಿಗೆ ಹೆಚ್ಚು ಸಾಲ ವಿತರಣೆಯಾಗಿದ್ದು, ಸಾಲ ಸಕಾಲದಲ್ಲಿ ಮರುಪಾವತಿಯಾಗುತ್ತಿಲ್ಲ. ಈ ಬಗ್ಗೆ ಗಂಭೀರವಾಗಿ ಪರಿಗಣಿಸಲಾಗುತ್ತಿದೆ ಎಂದರು.

**5 ಸಾವಿರ ಉದ್ಯೋಗ :** "ಕೋವಿಡ್ ನಂತರ ಸಹಕಾರ ಇಲಾಖೆಯಿಂದ ಐದು ಸಾವಿರ ಉದ್ಯೋಗ ನೀಡಬೇಕೆಂದು ಆದೇಶ ನೀಡಿದ್ದೆ. ಈ ಸಂಬಂಧ ಬೆಂಗಳೂರು ಹಾಲು ಒಕ್ಕೂಟ ಈಗಾಗಲೇ 297 ಹುದ್ದೆಗಳನ್ನು ಭರ್ತಿ ಮಾಡಲು ಮುಂದಾಗಿದೆ. ಮಂಡ್ಯ, ಮೈಸೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿನ ಸಹಕಾರ ಸಂಸ್ಥೆಗಳಲ್ಲಿ ಹಲವಾರು ಜನರಿಗೆ ಉದ್ಯೋಗ ನೀಡಲಾಗಿದೆ" ಎಂದು ಅವರು ಹೇಳಿದರು.

ಸಮಾರಂಭದಲ್ಲಿ ಬೆಂಗಳೂರು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನ ಅಧ್ಯಕ್ಷರಾದ ಡಿ. ಹನುಮಂತಯ್ಯ ಬ್ಯಾಂಕಿನ ಪ್ರಗತಿಯ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು.

ಬ್ಯಾಂಕಿನ ಉಪಾಧ್ಯಕ್ಷರಾದ ಎಂ.ಸಿ. ಪಟ್ಟಾಭಿರಾಮಯ್ಯ, ನಿರ್ದೇಶಕರುಗಳಾದ ವಿ.ಎಂ. ನಾಗರಾಜ, ಚುಂಚೆಗೌಡ್ರು, ಎನ್.ಫಣ್ಣಪ್ಪ, ಕೆ.ಕೃಷ್ಣಮೂರ್ತಿ, ದೊಡ್ಡ ಬಸವರಾಜು, ಮಂಜುನಾಥರೆಡ್ಡಿ, ವೈ. ಹೆಚ್. ಮಂಜು, ಜಯರಾಮು, ಬಾಬುರೆಡ್ಡಿ, ಸೊಣ್ಣೇಗೌಡ್ರು, ಅಂಜನಪ್ಪ, ವಿಜಯದೇವರ, ಸೋಮಶೇಖರೆಡ್ಡಿ, ಮೆಹಬೂಬ್, ಮುಖ್ಯಕಾರ್ಯನಿರ್ವಹಣಾಧಿಕಾರಿ ನಂಜುಂಡೇಗೌಡ, ಸಹಾಯಕ ನಿಬಂಧಕರಾದ ಉಮೇಶ್ ಮತ್ತಿತರರು ಉಪಸ್ಥಿತರಿದ್ದರು.

## ಬೆಂಗಳೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನೀಡಲಾಗುತ್ತಿರುವ ಸಾಲ ಸೌಲಭ್ಯಗಳು :

- ಬೆಳೆ ಸಾಲ – 4593 ಹೊಸ ರೈತ ಸದಸ್ಯರಿಗೆ ಕೆ.ಸಿ.ಸಿ. ಬೆಳೆ ಸಾಲ ರೂ. 40.68 ಕೋಟಿಗಳನ್ನು ನೀಡಲಾಗುತ್ತಿದೆ.
- ಸ್ತ್ರೀಶಕ್ತಿ ಸಂಘಗಳು ಮತ್ತು ಸ್ವಸಹಾಯ ಸಂಘಗಳ ಮೂಲಕ 55 ಗುಂಪುಗಳಿಗೆ ರೂ. 3.05 ಕೋಟಿಗಳನ್ನು ನೀಡಲಾಗುತ್ತಿದೆ.
- ಸರ್ಕಾರದಿಂದ ಹೊಸದಾಗಿ ರೂಪಿಸಿರುವ ಕೆ.ಸಿ.ಸಿ. ಅಲ್ಪಾವಧಿ ಬೆಳೆ ಸಾಲ ಮಾದರಿಯ ಹೈನುಗಾರಿಕೆ ಸಾಲ 368 ಜನರಿಗೆ ಒಟ್ಟು ರೂ. 84.87 ಲಕ್ಷಗಳನ್ನು ನೀಡಲಾಗುತ್ತಿದೆ.
- ನಬಾರ್ಡ್ ಸಹಾಯಧನದೊಂದಿಗೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಬಹುಸೇವಾ ಕೇಂದ್ರಗಳನ್ನಾಗಿ ಪರಿವರ್ತಿಸುವ ಸಂಬಂಧ 3 ಕೃಷಿ ಪತ್ತಿನ ಪ್ರಾಥಮಿಕ ಸಹಕಾರ ಸಂಘಗಳಿಗೆ ಒಟ್ಟು ರೂ. 1.10 ಕೋಟಿಗಳನ್ನು ನೀಡಲಾಗುತ್ತಿದೆ.
- 4 ವಿವಿಧ ಸಾಲಗಳ ಯೋಜನೆಗಳಿಂದ ಒಟ್ಟಾರೆಯಾಗಿ ರೂ. 45.68 ಕೋಟಿಗಳ ಸಾಲವನ್ನು ಈ ಕಾರ್ಯಕ್ರಮದಲ್ಲಿ ವಿತರಿಸಲಾಗುತ್ತಿದೆ.

## ಸಹಕಾರ ಇಲಾಖಾಧಿಕಾರಿಗಳಿಗೆ ಸಾಮರ್ಥ್ಯ ಬಲವರ್ಧನೆ ಕಾರ್ಯಾಗಾರ

# ತರಬೇತಿಯಿಂದ ವೃತ್ತಿಕೌಶಲ್ಯ ಹೆಚ್ಚಳ : ಅಪರ ನಿಬಂಧಕ ಬಿ.ಎಸ್. ಹರೀಶ್



**ದಾಂಡೇಲಿ :** ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಮತ್ತು ಸಹಕಾರ ಇಲಾಖೆ ಇವುಗಳ ಸಂಯುಕ್ತ ಆಶ್ರಯದಲ್ಲಿ ಸಹಕಾರ ಇಲಾಖಾಧಿಕಾರಿಗಳಿಗೆ “ಸಾಮರ್ಥ್ಯ ಬಲವರ್ಧನೆ” ಕುರಿತು ಇತ್ತೀಚೆಗೆ 3 ದಿನಗಳ ಕಾಲ ಕಾರ್ಯಾಗಾರವನ್ನು ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿಯಲ್ಲಿ ಏರ್ಪಡಿಸಲಾಗಿತ್ತು.

ಸಹಕಾರ ಸಂಘಗಳ ಅಪರ ನಿಬಂಧಕರಾದ ಬಿ.ಎಸ್.ಹರೀಶ್‌ರವರು ಕಾರ್ಯಕ್ರಮ ಉದ್ಘಾಟಿಸಿದರು. ಪ್ರತಿಯೊಬ್ಬರಿಗೂ ಅವರು ತೊಡಗಿಸಿಕೊಂಡಿರುವ ಕ್ಷೇತ್ರಗಳಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಲು ತರಬೇತಿಗಳು ಅವಶ್ಯಕವಾಗಿದ್ದು ಮಹಾಮಂಡಳವು ತರಬೇತಿ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಆಯೋಜಿಸುತ್ತಿರುವುದು ಶ್ಲಾಘನೀಯ ವಾದುದು ಎಂದರು.

ಸಹಕಾರ ಮಹಾಮಂಡಳದ ಆಡಳಿತಾಧಿಕಾರಿಗಳು ಹಾಗೂ ಅಪರ ನಿಬಂಧಕರಾದ ವೈ.ಹೆಚ್. ಗೋಪಾಲಕೃಷ್ಣ ಅವರು ಮಹಾ ಮಂಡಳದ ಕಾರ್ಯಚಟುವಟಿಕೆಗಳ ಬಗ್ಗೆ ತಿಳಿಸಿ, ಮಹಾಮಂಡಳವು ಆಯೋಜಿಸಿರುವ ಈ ಕಾರ್ಯಕ್ರಮದ ಸದುಪಯೋಗ ಪಡೆಯ ಬೇಕೆಂದು ತಿಳಿಸಿದರು.

ಪ್ರಾರಂಭದಲ್ಲಿ ಸಹಕಾರ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರಾದ ಎಸ್.ಎನ್. ಅರುಣ್‌ಕುಮಾರ್ ರವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಉಪನ್ಯಾಸಕರಾಗಿ ಎಸ್.ವಿ.ಸಿದ್ದಾಂತಿ, ನಿವೃತ್ತ ಪ್ರಾದೇಶಿಕ ನಿರ್ದೇಶಕರು ಆರ್‌ಐಸಿಎಂ ಬೆಂಗಳೂರು ಮತ್ತು ಜಯಸಿಂಹ, ಮಾನವಸಂಪನ್ಮೂಲ ತರಬೇತಿ ತಜ್ಞರು, ಬೆಂಗಳೂರು ಇವರುಗಳು ಕೋವಿಡ್-19ರ ಹಿನ್ನೆಲೆಯಲ್ಲಿ ಸಹಕಾರ ಸಂಘಗಳು ಎದುರುಸುತ್ತಿರುವ ಸಮಸ್ಯೆಗಳು ಮತ್ತು ಅವುಗಳಿಗೆ ಪರಿಹಾರಗಳ ಕುರಿತು ಹಾಗೂ ಅಧಿಕಾರಿಗಳ ಸಾಮರ್ಥ್ಯ ಬಲವರ್ಧನೆ ವಿಷಯಗಳ ಬಗ್ಗೆ ಉಪನ್ಯಾಸಗಳನ್ನು ನೀಡಿದರು.

ತರಬೇತಿಯ ಅವಧಿಯಲ್ಲಿ ಸಹಕಾರ ಇಲಾಖೆ ಅನುಷ್ಠಾನ ಗೊಳಿಸುತ್ತಿರುವ ಕಾಯ್ದೆಗಳ ನಿರ್ವಹಣೆ, ದಾವೆಗಳ ಇತ್ಯರ್ಥ, ಕೋವಿಡ್ ಸಂದರ್ಭದಲ್ಲಿ ಸಹಕಾರ ಸಂಘಗಳಿಂದ ಸಾಲ ವಸೂಲಾತಿ ಚಿಂತನೆಗಳು, ಲೆಕ್ಕಪರಿಶೋಧನೆ ಹಾಗೂ ಚಾಲ್ತಿಯಲ್ಲಿರುವ ಸಾಫ್ಟ್‌ವೇರ್ ಬಗ್ಗೆ ಅಧಿಕಾರಿಗಳು ಗುಂಪು ಚರ್ಚೆಯಲ್ಲಿ ಭಾಗವಹಿಸಿದ್ದರು.



# ಕೇಂದ್ರ ಬಜೆಟ್ - 2021-22 ಪ್ರಧಾನಿ ಮೋದಿ ಪ್ರಶಂಸೆ

## ಆರ್ಥಿಕತೆ ಚೇತರಿಕೆಗೆ ಕ್ರಮ - ನಿರ್ಮಲಾ ಸೀತಾರಾಮನ್

**ನವದೆಹಲಿ : ಕೋವಿಡ್-19 ಸಾಂಕ್ರಾಮಿಕದಿಂದಾಗಿ ತತ್ತರಿಸಿರುವ ದೇಶದ ಅರ್ಥವ್ಯವಸ್ಥೆಯನ್ನು ಮತ್ತೆ ಹಳಿಗೆ ತರುವ ಮಹತ್ವದ ಹೊಣೆ ಹೊತ್ತಿರುವ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಉದ್ಯೋಗ ಸೃಷ್ಟಿಗೆ ದಾರಿಯಾಗುವ ಮೂಲ ಸೌಕರ್ಯ ಅಭಿವೃದ್ಧಿಗೆ ಗಮನ ಕೇಂದ್ರೀಕರಿಸಿ ಫೆಬ್ರವರಿ 1 ರಂದು ಲೋಕಸಭೆಯಲ್ಲಿ ಒಟ್ಟು ರೂ. 34.83 ಲಕ್ಷ ಕೋಟಿ ಗಾತ್ರದ 2021-22ನೇ ಸಾಲಿನ ಬಜೆಟ್ ಮಂಡಿಸಿದ್ದಾರೆ. ಒಟ್ಟು ಆರು ಪ್ರಮುಖ ಕ್ಷೇತ್ರಗಳಿಗೆ ಆದ್ಯತೆ ನೀಡುವ ಮೂಲಕ ಆರ್ಥಿಕತೆಯನ್ನು ಸರಿದಾರಿಗೆ ತರುವ ಮುನ್ನೋಟವನ್ನು ದೇಶದ ಮುಂದಿರಿಸಿದ್ದಾರೆ.**



ಆದಾಯ ತೆರಿಗೆ ಯಥಾಸ್ಥಿತಿಯಲ್ಲಿ ಮುಂದುವರೆದಿದ್ದು, ಗೃಹ ಸಾಲಗಳ ಮೇಲಿನ ತೆರಿಗೆ ವಿನಾಯಿತಿಯನ್ನು ಇನ್ನೂ ಒಂದು ವರ್ಷಕಾಲ ಮುಂದೂಡಿರುವ ನಿರ್ಮಲಾ ಸೀತಾರಾಮನ್ 75 ವರ್ಷ ಮೇಲ್ಪಟ್ಟ ಪಿಂಚಣಿದಾರರಿಗೆ ಟ್ಯಾಕ್ಸ್ ರಿಟನ್ಸ್ ಸಲ್ಲಿಕೆಯಿಂದ ವಿನಾಯಿತಿ ನೀಡಿದ್ದಾರೆ. ಸ್ಟಾರ್ಟ್ ಅಪ್‌ಗಳಿಗೆ ತೆರಿಗೆ ರಜೆ ಇನ್ನೂ ಒಂದು ವರ್ಷ ವಿಸ್ತರಿಸಿರುವ ಅವರು ಪೆಟ್ರೋಲ್, ಡೀಸೆಲ್, ಕಾಳುಗಳು ಸೇರಿದಂತೆ ವಿವಿಧ ಉತ್ಪನ್ನಗಳ ಮೇಲೆ ಸೆಸ್ ವಿಧಿಸಿದ್ದಾರೆ.

ಆರೋಗ್ಯ ಕ್ಷೇತ್ರದ ಮೇಲೆ ಗಣನೀಯ ಮೊತ್ತವನ್ನು ವೆಚ್ಚ ಮಾಡಬೇಕಾದ ಅನಿವಾರ್ಯವನ್ನು ಕೋವಿಡ್-19 ಮನದಟ್ಟು ಮಾಡಿದೆ. ಹಾಗಾಗಿಯೇ, ಆರೋಗ್ಯ ಕ್ಷೇತ್ರದ ಮೇಲೆ ಒಟ್ಟು ರೂ. 2.23 ಲಕ್ಷ ಕೋಟಿ ವೆಚ್ಚ ಮಾಡುವುದಾಗಿ ನಿರ್ಮಲಾ ಅವರು ಬಜೆಟ್‌ನಲ್ಲಿ ಭರವಸೆ ನೀಡಿದ್ದಾರೆ. ಕಳೆದ ವರ್ಷ ಈ ವಲಯದಲ್ಲಿ ಸರ್ಕಾರ ಮಾಡಿದ್ದ ವೆಚ್ಚಕ್ಕೆ ಹೋಲಿಸಿದರೆ ಇದು ಶೇಕಡ 137ರಷ್ಟು ಜಾಸ್ತಿ.

ಉದ್ಯೋಗ ಸೃಷ್ಟಿಗೆ ಇರುವ ಬಹು ದೊಡ್ಡ ಅಸ್ತ್ರ ಎಂದು ಅರ್ಥಶಾಸ್ತ್ರಜ್ಞರು ಮತ್ತೆ ಮತ್ತೆ ಹೇಳಿರುವ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಗಳು ಈ ಬಜೆಟ್‌ನಲ್ಲಿ ಪ್ರಾಧಾನ್ಯ ಪಡೆದಿವೆ. 2021-22ರಲ್ಲಿ ಕೇಂದ್ರ ಸರ್ಕಾರದ ಒಟ್ಟು ಬಂಡವಾಳ ವೆಚ್ಚವು ಒಟ್ಟು ರೂ. 5.54 ಲಕ್ಷ ಕೋಟಿ ಆಗಿರಲಿದೆ. 'ಇದು 2020-21ರ ಬಜೆಟ್‌ಗೆ ಹೋಲಿಸಿದರೆ ಶೇ.34.5ರಷ್ಟು ಜಾಸ್ತಿ' ಎಂದು ನಿರ್ಮಲಾ ಅವರು ಹೇಳಿದ್ದಾರೆ.

ಬಂಡವಾಳ ವೆಚ್ಚವನ್ನು ಜಾಸ್ತಿ ಮಾಡಿ, ಅರ್ಥ ವ್ಯವಸ್ಥೆಯ ಬಂಡಿಗೆ ಕೀಲೆಣ್ಣೆ ಹಾಕುವ ಯತ್ನ ನಡೆಸಿದ್ದಾರೆ.

**ಕೃಷಿ ಮೂಲಸೌಕರ್ಯ ಸೆಸ್ :** ಕೃಷಿಯನ್ನು ಉದ್ಯಮ ಎಂಬಂತೆ ಕಾಣಬೇಕು ಎಂದು ಕಳೆದವಾರ ಮಂಡನೆಯಾದ ಆರ್ಥಿಕ ಸಮೀಕ್ಷೆ ಸರ್ಕಾರಕ್ಕೆ ಸಲಹೆ ಮಾಡಿತ್ತು. 'ಕೃಷಿ ಮೂಲ ಸೌಕರ್ಯವನ್ನು ಸುಧಾರಿಸುವ ಜರೂರು ಇದೆ. ಆಗ ಕೃಷಿ ಉತ್ಪಾದನೆ ಹೆಚ್ಚಿಸಲು ಆಗುತ್ತದೆ. ಇದರಿಂದಾಗಿ ಕೃಷಿಕರ ಆದಾಯ ಹೆಚ್ಚುತ್ತದೆ. ಈ ಉದ್ದೇಶಕ್ಕೆ ಸಂಪನ್ಮೂಲ ಸಂಗ್ರಹಿಸಲು ಕೃಷಿ ಮೂಲಸೌಕರ್ಯ ಮತ್ತು ಅಭಿವೃದ್ಧಿ ಸೆಸ್ ವಿಧಿಸಲಾಗುತ್ತದೆ' ಎಂದು ಬಜೆಟ್‌ನಲ್ಲಿ ಪ್ರಕಟಿಸಲಾಗಿದೆ.

### ಅಗ್ಗ

- ಕಬ್ಬಿಣ, ಉಕ್ಕು ಮತ್ತು ತಾಮ್ರದ ವಸ್ತುಗಳು
- ಚರ್ಮದ ಸರಕುಗಳು
- ಆಮದು ಮಾಡಿಕೊಳ್ಳಲಾದ ಹರಳು/ರತ್ನ
- ಸೌರಶಕ್ತಿ ಸೆಲ್‌ಗಳು
- ಚಿನ್ನ ಮತ್ತು ಬೆಳ್ಳಿ
- ನೈಲಾನ್ ಬಟ್ಟೆ
- ಆಮದು ಮಾಡಿಕೊಳ್ಳಲಾದ ವಾಹನಗಳ ಬಿಡಿಭಾಗಗಳು
- ಮೊಬೈಲ್ ಫೋನ್ ಮತ್ತು ಚಾರ್ಜರ್

# ಕೃಷಿ ಸಾಲದ ಗುರಿ ಶೇ.10ರಷ್ಟು ಹೆಚ್ಚಳ

ಕೃಷಿ ಕಾಯ್ದೆಗಳನ್ನು ವಿರೋಧಿಸಿ ರಾಷ್ಟ್ರದಾದ್ಯಂತ ತೀವ್ರ ಸ್ವರೂಪದ ಹೋರಾಟಗಳು ನಡೆಯುತ್ತಿರುವುದರಿಂದ, 2021–22ನೇ ಸಾಲಿನ ಬಜೆಟ್‌ನಲ್ಲಿ ಈ ಕ್ಷೇತ್ರಕ್ಕೆ ಸರ್ಕಾರ ಯಾವ ಘೋಷಣೆಗಳನ್ನು ಮಾಡುತ್ತದೆ ಎಂಬ ಬಗ್ಗೆ ವಿಶೇಷವಾದ ಕುತೂಹಲವಿತ್ತು.

'ನಮ್ಮ ಸರ್ಕಾರವು ರೈತರ ಏಳಿಗೆಗೆ ಬದ್ಧವಾಗಿದೆ' ಎನ್ನುತ್ತಲೇ ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದ ಪ್ರಸ್ತಾವನೆಗಳನ್ನು ಮುಂದಿಟ್ಟ ವಿತ್ತಸಚಿವೆ ನಿರ್ಮಲಾ ಸೀತಾರಾಮನ್, ಕೃಷಿ ಸಾಲ ವಿತರಣೆಯ ಗುರಿಯನ್ನು ರೂ. 16.5 ಲಕ್ಷ ಕೋಟಿಗೆ (ಶೇ.10ರಷ್ಟು) ಹೆಚ್ಚಿಸಿದ್ದಲ್ಲದೆ, ಬೆಳೆ ಕಟಾವಿನ ನಂತರದ ಮೂಲ ಸೌಲಭ್ಯಗಳ ಅಭಿವೃದ್ಧಿಗಾಗಿ ಶೇ.2.5 ರಿಂದ ಆರಂಭಿಸಿ ಕೆಲವು ಉತ್ಪನ್ನಗಳ ಮೇಲೆ ಶೇ.100ರಷ್ಟು 'ಕೃಷಿ ಮೂಲ ಸೌಲಭ್ಯ ಮತ್ತು ಅಭಿವೃದ್ಧಿ ಸೆಸ್' (ಎಐಡಿಸಿ) ಜಾರಿ ಮಾಡುವುದಾಗಿಯೂ ತಿಳಿಸಿದರು.

ಈ ಸೆಸ್ ಸಾಮಾನ್ಯ ಗ್ರಾಹಕರಿಗೆ ಹೊರೆಯಾಗುವುದಿಲ್ಲ ಎಂದೂ ಸಚಿವೆ ಹೇಳಿದರು. 'ರೈತರು ಬೆಳೆಗೆ ಮಾಡುವ ವೆಚ್ಚದ 1.5ರಷ್ಟು ಪಟ್ಟು ಆದಾಯ ಬರಬೇಕೆಂಬ ಉದ್ದೇಶದಿಂದ ಕನಿಷ್ಠ ಬೆಂಬಲ ಬೆಲೆಯಲ್ಲಿ (ಎಂಎಸ್‌ಪಿ) ಅಗತ್ಯ ಬದಲಾವಣೆಗಳನ್ನು ಮಾಡಲಾಗಿದೆ. ಎಂಎಸ್‌ಪಿ ಅಡಿ ಖರೀದಿ ಮಾಡುವ ಧಾನ್ಯಗಳ ಪ್ರಮಾಣವು ಕಳೆದ ಕೆಲವು ವರ್ಷಗಳಲ್ಲಿ ಸತತವಾಗಿ ಏರಿಕೆಯಾಗುತ್ತಿದೆ' ಎಂದರು.

2013–14ನೇ ಸಾಲಿನಲ್ಲಿ ಭತ್ತ, ಗೋಧಿ, ಹತ್ತಿ ಮುಂತಾದ ಉತ್ಪನ್ನಗಳ ಖರೀದಿಗಾಗಿ ಮಾಡಿದ್ದ ವೆಚ್ಚ ಹಾಗೂ 2020–21ನೇ ಸಾಲಿನಲ್ಲಿ ಮಾಡಿರುವ ವೆಚ್ಚಗಳ ಅಂಕಿ ಅಂಶಗಳನ್ನು ನೀಡಿದರು. 'ಕಳೆದ ಆರು ವರ್ಷಗಳಲ್ಲಿ ಗೋಧಿ, ಧಾನ್ಯಗಳು ಹಾಗೂ ಹತ್ತಿಯ ಖರೀದಿ ಪ್ರಮಾಣವು ಹಲವು ಪಟ್ಟು ಹೆಚ್ಚಾಗಿದೆ. 43.66 ಲಕ್ಷ ರೈತರು ಕನಿಷ್ಠ ಬೆಂಬಲ ಬೆಲೆಯ ಲಾಭಗಳನ್ನು ಪಡೆದಿದ್ದಾರೆ ಎಂದು ನಿರ್ಮಲಾ ತಿಳಿಸಿದರು.

## ಕೃಷಿ ಕ್ಷೇತ್ರ : ಪ್ರಮುಖ ಅಂಶಗಳು




- ಪ್ರಸಕ್ತ ಟೊಮೆಟೊ, ಈರುಳ್ಳಿ ಹಾಗೂ ಆಲುಗಡ್ಡೆಗಳಿಗೆ ಮಾತ್ರ ಸೀಮಿತವಾಗಿರುವ 'ಆಪರೇಷನ್ ಗ್ರೀನ್' ಯೋಜನೆಯು ಶೀಘ್ರದಲ್ಲಿ ಹಾಳಾಗುವ ಇನ್ನೂ 22 ಸರಕುಗಳಿಗೆ ವಿಸ್ತರಣೆ.
- ಕೊಚ್ಚಿ, ಚೆನ್ನೈ, ವಿಶಾಖಪಟ್ಟಣ, ಪರದೀಪ್ (ಅಸ್ಸಾಂ) ಹಾಗೂ ಪೆಟುವಾಘಾಟ್ (ಪಶ್ಚಿಮ ಬಂಗಾಳ) ಮೀನುಗಾರಿಕಾ ಬಂದರುಗಳ ಅಭಿವೃದ್ಧಿ. ಇವುಗಳನ್ನು ಆರ್ಥಿಕ ಚಟುವಟಿಕೆಗಳ ಕೇಂದ್ರಗಳಾಗಿ ರೂಪಿಸಲು ಪ್ರಸ್ತಾವನೆ. ಕಡಲ ಕೃಷಿ ಉತ್ತೇಜನಕ್ಕೆ ಹೆಚ್ಚಿನ ಅನುದಾನ.
- ಒಳನಾಡು ಮೀನುಗಾರಿಕೆಯ ಉತ್ತೇಜನಕ್ಕೂ ಅಗತ್ಯ ಕ್ರಮ.
- ಎಪಿಎಂಸಿಯ ಇನ್ನೂ 1,000 ಮಂಡಿಗಳನ್ನು ಎಲೆಕ್ಟ್ರಾನಿಕ್ ರಾಷ್ಟ್ರೀಯ ಮಾರುಕಟ್ಟೆಯ (ಇ–ನಾಮ್) ಜತೆ ಸಂಯೋಜಿಸಲು ಕ್ರಮ.
- ಎಪಿಎಂಸಿಗಳ ಮೂಲಸೌಲಭ್ಯ ಅಭಿವೃದ್ಧಿಗೂ ಕೃಷಿ ಮೂಲಸೌಲಭ್ಯ ಅಭಿವೃದ್ಧಿ ನಿಧಿ ಬಳಕೆಗೆ ಒಪ್ಪಿಗೆ.
- ಪಶುಸಂಗೋಪನೆ, ಡೇರಿ ಹಾಗೂ ಮೀನುಗಾರಿಕಾ ಕ್ಷೇತ್ರಗಳಿಗೆ ಹೆಚ್ಚಿನ ಸಾಲ ಸೌಲಭ್ಯ.

## ನಿರ್ದೇಶಕರಾಗಿ ಡಾ. ಬಿ.ಡಿ. ಭೂಕಾಂತ ಆಯ್ಕೆ



ಮಹಾಮಂಡಳದ ಉಪಾಧ್ಯಕ್ಷರಾದ ಡಾ. ಬಿ.ಡಿ. ಭೂಕಾಂತರವರು ಕರ್ನಾಟಕ ರಾಜ್ಯ ಕೈಗಾರಿಕಾ ಸಹಕಾರ ಮಹಾಮಂಡಳ ನಿ., ಬೆಂಗಳೂರು, ಕರ್ನಾಟಕ ರಾಜ್ಯ ತೆಂಗು ನಾರಿನ ನೂಲಿನ ಸಹಕಾರ ಮಹಾಮಂಡಳ ನಿ., ಬೆಂಗಳೂರು ಮತ್ತು ಕರ್ನಾಟಕ ರಾಜ್ಯ ತೋಟಗಾರಿಕ ಸಹಕಾರ ಮಾರಾಟ ಮಹಾಮಂಡಳಗಳಿಗೆ ನಿರ್ದೇಶಕರಾಗಿ ಆಯ್ಕೆಯಾಗಿರುತ್ತಾರೆ. ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಅಧ್ಯಕ್ಷರಾದ ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ ಅವರು ಸೇರಿದಂತೆ ಆಡಳಿತ ಮಂಡಳಿ ನಿರ್ದೇಶಕರುಗಳು ಅಭಿನಂದಿಸಿ ಶುಭಕೋರಿದರು.


ಸಹಕಾರಿ ಪಿತಾಮಹ
ಶ್ರೀ ಸಿದ್ದನಗೌಡ
ಸಂಣರಾಮನಗೌಡ ಪಾಟೀಲ್
ಸಹಕಾರ ರತ್ನ
ಶ್ರೀ ಬಿ.ಎಲ್.ಲಕ್ಕೇಗೌಡ
ಸಂಸ್ಥಾಪಕರು
ಬೆಂಗಳೂರು
ಸಹಕಾರ ರತ್ನ
ಶ್ರೀಮತಿ ಕೆ.ಲಲಿತ ಜಿ.ಟಿ.ದೇವೇಗೌಡ
ಅಧ್ಯಕ್ಷರು
ಸಹಕಾರ ರತ್ನ
ಡಾ. ಬಿ.ಡಿ.ಭೂಕಾಂತ
ಉಪಾಧ್ಯಕ್ಷರು
ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ.,
ಬೆಂಗಳೂರು ಇದರ ಉದ್ದೇಶಿತ ಕಟ್ಟಡ
ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ.,
ಕ ರಾ ಸ ಪ ಸಂ ಮ ನಿ.,
ವಿಳಾಸ: ನಂ.126, ಜೆ.ಬಿ. ಕಾವಲ್, ರಾಜೀವ್‌ಗಾಂಧಿನಗರ, ವಾರ್ಡ್ ನಂ: 43, ನಂದಿನಿ ಬಡಾವಣೆ, ಬೆಂಗಳೂರು–560 096
ನಿವೇಶನ ಸಂಖ್ಯೆ: 126, ನಿವೇಶನದ ವಿಸ್ತೀರ್ಣ: 3594, ಅಂದಾಜು ವೆಚ್ಚ: 3.15 ಕೋಟಿ

# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ.,

ನಂ16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003

ದೂರವಾಣಿ : 080 23564444, 23464033, 23464034

ಇ–ಮೇಲ್ : ksccsfltd@gmail.com, info@ksccsf.org, ವೆಬ್‌ಸೈಟ್ : www.ksccsf.org


ಸಂಖ್ಯೆ : ಕರಾಸಪಸಂಮನಿ/01/2020–21 ದಿನಾಂಕ : 16.02.2021

# ಪತ್ತಿನ ಸಹಕಾರ ಸಂಘಗಳ ಅದ್ಯ ಗಮನಕ್ಕಾಗಿ

**ವಿಷಯ : ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಇದರ ಕಟ್ಟಡ ನಿರ್ಮಾಣಕ್ಕೆ ದೇಣಿಗೆ ನೀಡುವ ಕುರಿತು ಮನವಿ.**

ಮಾನ್ಯರೇ,

ನಿವೃತ್ತ ವಿಶೇಷ ಜಿಲ್ಲಾಧಿಕಾರಿಗಳು ಹಾಗೂ ಸಹಕಾರಿ ರತ್ನ ಪುರಸ್ಕೃತರು ಆದ ಸನ್ಮಾನ್ಯ "ಶ್ರೀ ಬಿ.ಎಲ್.ಲಕ್ಕೇಗೌಡ"ರವರ ಪರಿಶ್ರಮದಿಂದ ಕರ್ನಾಟಕ ರಾಜ್ಯದ ಪತ್ತಿನ ಸಹಕಾರ ಸಂಘಗಳ ಸರ್ವತೋಮುಖ ಅಭಿವೃದ್ಧಿಗೆ ಮತ್ತು ಒಕ್ಕೂಟ ವ್ಯವಸ್ಥೆಯ ಉದ್ದೇಶಕ್ಕೆ ಈ ಮಹಾಮಂಡಳವು 2004ರಲ್ಲಿ ಸ್ಥಾಪನೆಯಾಯಿತು. ಪ್ರಾರಂಭದಲ್ಲಿ ಶ್ರೀ ಬಿ.ಎಲ್. ಲಕ್ಕೇಗೌಡರವರು ಅಧ್ಯಕ್ಷರಾಗಿ ಹಾಗೂ ಶ್ರೀ ವಿ.ರಾಜುರವರು ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸಿರುತ್ತಾರೆ. ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಪತ್ತಿನ ಸಹಕಾರ ಸಂಘಗಳಿಗೆ ಅಭಿವೃದ್ದಿಗೆ ಶಿಕ್ಷಣ ತರಬೇತಿ ಮಾರ್ಗದರ್ಶನದ ಜೊತೆ ಜೊತೆಗೆ ಸಹಕಾರ ಸಂಘಗಳ ಸಮಸ್ಯೆ ಮತ್ತು ಆಶೋತ್ತರಗಳಿಗೆ ಸ್ಪಂದಿಸಿ ಲೆಕ್ಕಪರಿಶೋಧಕರ ವರದಿಯಲ್ಲಿ "ಎ"ದರ್ಜೆಯ ಮಹಾಮಂಡಳವಾಗಿ ಗುರುತಿಸಿಕೊಂಡು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ತಮಗೆ ತಿಳಿಸಲು ಹರ್ಷಿಸುತ್ತೇವೆ.

ಪ್ರಸ್ತುತ ಮಹಾಮಂಡಳವು ಮೇಲ್ಕಂಡ ವಿಳಾಸದ ಕಟ್ಟಡವನ್ನು ಲೀಸ್‌ಗೆ ಪಡೆದುಕೊಂಡು ಕಾರ್ಯನಿರ್ವಹಿಸುತ್ತಿದ್ದು, ಮಹಾಮಂಡಳವು ಸ್ವಂತ ಕಟ್ಟಡ ಹೊಂದುವ ಉದ್ದೇಶದಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿ.ಡಿ.ಎ) ವ್ಯಾಪ್ತಿಯಲ್ಲಿನ ನಂದಿನಿ ಬಡಾವಣೆ, ಬೆಂಗಳೂರು ಇಲ್ಲಿ 3594.38 ಚದರ ಅಡಿಯ ಮೂಲೆ ನಿವೇಶನವನ್ನು ಇ–ಹರಾಜು ಪ್ರಕ್ರಿಯೆಯ ಮೂಲಕ ಖರೀದಿಸಿದ್ದು ಸದರಿ ನಿವೇಶನದಲ್ಲಿ ಕಟ್ಟಡ ನಿರ್ಮಾಣ ಮಾಡಲು ಅಂದಾಜು ಸುಮಾರು ರೂ.3.15ಕೋಟಿ ಅಂದಾಜು ಪಟ್ಟಿ ಸಿದ್ದಪಡಿಸಿದ್ದು ಕಟ್ಟಡ ನಿರ್ಮಾಣಕ್ಕೆ ಬೆಂಗಳೂರು ಮಹಾನಗರ ಪಾಲಿಕೆಯಿಂದ ನಕ್ಷೆ ಮಂಜೂರಾಗಿರುತ್ತದೆ.. ಸಹಕಾರ ಇಲಾಖೆಯಿಂದ ಹಾಗೂ ಲೋಕೋಪಯೋಗಿ ಇಲಾಖೆಯಿಂದ ಆಡಳಿತಾತ್ಮಕ ಮತ್ತು ತಾಂತ್ರಿಕ ಮೌಲ್ಯಮಾಪನದ ಮಂಜೂರಾತಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಕಟ್ಟಡ ನಿರ್ಮಾಣದ ಕಾರ್ಯ ಪ್ರಾರಂಭವಾಗುತ್ತಿದ್ದು ಕಟ್ಟಡ ನಿರ್ಮಾಣ ಕಾರ್ಯದ ಉದ್ದೇಶ ಸಾಧನೆಗೆ ಮಾನ್ಯ ಸದಸ್ಯ ಸಹಕಾರ ಸಂಘಗಳ ಆಡಳಿತ ಮಂಡಳಿಯವರ ಮಾರ್ಗದರ್ಶನ ಮತ್ತು ಆರ್ಥಿಕ ಧನ ಸಹಾಯ ಅತೀ ಮುಖ್ಯವಾಗಿದೆ.

25,000/–ರೂ ಗಳಿಗೂ ಹೆಚ್ಚು ದೇಣಿಗೆ ನೀಡಿದ ಸಹಕಾರ ಸಂಘಗಳ ಮತ್ತು ಸಹಕಾರಿಗಳ ಹೆಸರುಗಳನ್ನು ಗ್ರಾನೈಟ್ ಕಲ್ಲಿನಲ್ಲಿ ಕೆತ್ತಿಸಿ ಶಾಶ್ವತವಾಗಿ ಸಾರ್ವಜನಿಕವಾಗಿ ಉಳಿಯುವಂತೆ ಮಾಡಲು ಆಡಳಿತಮಂಡಳಿ ತೀರ್ಮಾನಿಸಿರುತ್ತದೆ.

ಆದುದರಿಂದ ಸಹಕಾರಿ ಬಂಧುಗಳಾದ ತಾವುಗಳು ತಮ್ಮ ಸಹಕಾರ ಸಂಘದ ಮೂಲಕ ಕಟ್ಟಡ ನಿಧಿಗೆ ಹೆಚ್ಚಿನ ಮಟ್ಟದಲ್ಲಿ ದೇಣಿಗೆ ನೀಡಿ ಸುಸಜ್ಜಿತ ಹಾಗೂ ಆದುನಿಕ ವಿನ್ಯಾಸದ ಕಟ್ಟಡ ನಿರ್ಮಾಣಕ್ಕೆ ಸಹಾಯ ಮಾಡಿ ಸಹಕರಿಸಲು ಮಹಾಮಂಡಳದ ಆಡಳಿತಮಂಡಳಿ ಸದಸ್ಯರುಗಳ ಪರವಾಗಿ ತಮ್ಮಲ್ಲಿ ಹಾಗೂ ತಮ್ಮ ಆಡಳಿತಮಂಡಳಿ ಸದಸ್ಯರುಗಳಲ್ಲಿ ಕೋರುತ್ತೇವೆ.

ವಂದನೆಗಳೊಂದಿಗೆ.

ತಮ್ಮ ವಿಶ್ವಾಸಿಗಳು

**(ಡಾ. ಬಿ.ಡಿ. ಭೂಕಾಂತ)**
**ಉಪಾಧ್ಯಕ್ಷರು**

**(ಕೆ.ಲಲಿತ ಜಿ.ಟಿ.ದೇವೇಗೌಡ)**
**ಅಧ್ಯಕ್ಷರು**

ದೇಣಿಗೆಯನ್ನು ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಇದರ ಈ ಕೆಳಗೆ ನಮೂದಿಸಿದ ಬ್ಯಾಂಕಿನ ಖಾತೆಗೆ ಚೆಕ್, ಡಿ.ಡಿ, ಆರ್.ಟಿ.ಜಿಎಸ್ ಅಥವಾ ಎನ್.ಇ.ಎಫ್.ಟಿ ಮೂಲಕ ನೀಡಲು ಕೋರುತ್ತೇವೆ.

| | | | |
|---|---|---|---|
| 1. | ಬ್ಯಾಂಕಿನ ಹೆಸರು | : | The Karnataka State Co-op. Apex Bank Ltd., |
| 2. | ಖಾತೆಯ ಹೆಸರು | : | Karnataka State Co-op. Credit Societies Federation Ltd., |
| 3. | ಖಾತೆ ಸಂಖ್ಯೆ | : | 1014111030000018 |
| 4. | ಖಾತೆಯ ವಿಧಾನ | : | Current Account |
| 5. | ಶಾಖೆಯ ಹೆಸರು | : | Vyalikaval Branch, Bangalore-560003 |
| 6. | ಐ.ಎಫ್.ಎಸ್.ಸಿ.ಕೋಡ್ | : | KSCB 0000001 |

# ಸಹಕಾರ ಮಾರ್ಗದರ್ಶಿ : ಆಧುನಿಕ ಸಹಕಾರ ಚಳುವಳಿಯ ಉಗಮ

▸▸ **ಬಸವೇಗೌಡ,** ನಿವೃತ್ತ ಅಪರ ನಿಬಂಧಕರು ಹಾಗೂ ಅಧ್ಯಕ್ಷರು, ಕರ್ನಾಟಕ ಪ್ರಗತಿಪರ ಸಹಕಾರಿಗಳ ವೇದಿಕೆ (ರಿ.) ಬೆಂಗಳೂರು.

...ಹಿಂದಿನ ಸಂಚಿಕೆಯಿಂದ

11) 1947ರ ಜೂನ್ ಅಂತ್ಯಕ್ಕೆ ಪ್ರಗತಿ – ಒಟ್ಟು 1.39 ಲಕ್ಷ ಸಹಕಾರ ಸಂಘಗಳು ಸ್ಥಾಪನೆಯಾಗಿದ್ದು, 91 ಲಕ್ಷ ಸದಸ್ಯರನ್ನು ಹಾಗೂ 156 ಕೋಟಿ ದುಡಿಯುವ ಬಂಡವಾಳವನ್ನು ಹೊಂದಿದ್ದವು. ಒಟ್ಟು ಸಂಘಗಳ ಪೈಕಿ ಶೇ.73 ರಷ್ಟು ಪ್ರಾಥಮಿಕ ಕೃಷಿ ಪತ್ತಿನ ಸಂಘಗಳಿದ್ದವು. ಸರ್ಕಾರವು ನೀಡಿದ್ದ ಸಾಲದ ಪ್ರಮಾಣವು ಒಟ್ಟು ದುಡಿಯುವ ಬಂಡವಾಳದ ಪೈಕಿ ಕೇವಲ ಶೇ. 1.87ರಷ್ಟು ಮಾತ್ರ.

12) ಭಾರತದಲ್ಲಿ ಸಹಕಾರ ಚಳವಳಿಯು ಸರ್ಕಾರದ ಪ್ರಾಯೋಜಕತ್ವದಲ್ಲಿ ಆರಂಭವಾಗಿರುತ್ತದೆ. ಭಾರತದಲ್ಲಿ ಸಹಕಾರ ಚಳುವಳಿಯು ಯುರೋಪಿನ ಕೆಲವು ದೇಶಗಳಂತೆ ಸಹಕಾರ ತತ್ವಜ್ಞಾನಿಗಳ ಬೋಧನೆಯಿಂದಾಗಲೀ ಅಥವಾ ಜನರ ಸ್ವಯಂ ಪ್ರೇರಣೆಯಿಂದಾಗಲೀ ಆರಂಭವಾಗಿರುವುದಿಲ್ಲ. ಬ್ರಿಟಿಷ್ ಸರ್ಕಾರವು ಸಂಘಗಳ ಸ್ಥಾಪನೆಗೆ ಉತ್ತೇಜನ ನೀಡಿದರೂ ಅವುಗಳಿಗೆ ಅಗತ್ಯವಿದ್ದ ಸಂಪನ್ಮೂಲಗಳನ್ನು ಒದಗಿಸಲಿಲ್ಲ. ಚಳವಳಿಯ ಬೆಳವಣಿಗೆಯು ರಾಷ್ಟ್ರದ ಎಲ್ಲಾ ಭಾಗಗಳಲ್ಲಿ ಸಮನಾಗಿ ಬೆಳೆಯಲಿಲ್ಲ. ಬಾಂಬೆ, ಮದ್ರಾಸ್, ಮೈಸೂರು, ಪಂಜಾಬ್ ಪ್ರಾಂತ್ಯಗಳಲ್ಲಿ ಬೇರೆ ಭಾಗಗಳಿಗಿಂತ ಒಳ್ಳೆಯದಿತ್ತು. ಚಳವಳಿಯು ಯೋಜನಾ ರಹಿತವಾಗಿತ್ತು. ಕೇಂದ್ರ ಮತ್ತು ಪ್ರಾಂತೀಯ ಸರ್ಕಾರಗಳು ಅನೇಕ ಸಮಿತಿಗಳನ್ನು ರಚಿಸಿ ವರದಿ ಪಡೆದಿದ್ದರೂ ಅವುಗಳನ್ನು ಅನುಷ್ಠಾನ ಮಾಡಲು ಪ್ರಾಮುಖ್ಯತೆಯನ್ನು ನೀಡಿರುವುದಿಲ್ಲ. ಸ್ವಾತಂತ್ರ್ಯ ಪೂರ್ವದ ಚಳವಳಿಯು ಸರ್ಕಾರದ ತಾಟಸ್ಥ್ಯ ಧೋರಣೆ, ಶಿಕ್ಷಣ ಮತ್ತು ತರಬೇತಿಯ ಕೊರತೆ, ಮೂಲಭೂತ ಸೌಕರ್ಯಗಳ ಕೊರತೆ, ಆಡಳಿತ ವರ್ಗ ಮತ್ತು ಸಿಬ್ಬಂದಿಯ ಅದಕ್ಷತೆ, ನಾಯಕತ್ವದ ಕೊರತೆ, ಅರಿವು ಮತ್ತು ಬದ್ಧತೆಯ ಕೊರತೆ, ಇತ್ಯಾದಿಯಿಂದ ತುಂಬಿತ್ತು. ಒಟ್ಟಾರೆ ಪೂರಕ ಪರಿಸರ ಪರಿಸರ, ಪರಿಸ್ಥಿತಿ ಮತ್ತು ಸೌಲಭ್ಯಗಳು ಇರಲಿಲ್ಲ. ಹೀಗಾಗಿ ಸಹಕಾರ ಚಳುವಳಿಯು ಆರೋಗ್ಯಕರವಾಗಿ ಬೆಳೆಯಲಿಲ್ಲ.



**ಸ್ವಾತಂತ್ರ್ಯದ ನಂತರ ಸಹಕಾರ ಚಳವಳಿ :** 1947ರಲ್ಲಿ ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ ರಾಷ್ಟ್ರದ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ವೈಜ್ಞಾನಿಕ ಅಭಿವೃದ್ಧಿ ಸಾಧನೆಗಾಗಿ ಪಂಚವಾರ್ಷಿಕ ಯೋಜನೆಗಳನ್ನು ಅಳವಡಿಸಿಕೊಳ್ಳಲಾಯಿತು. ಈ ಪಂಚವಾರ್ಷಿಕ ಯೋಜನೆಗಳಲ್ಲಿ ಸಹಕಾರ ಕ್ಷೇತ್ರಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು, ವಿಶೇಷವಾಗಿ ಗ್ರಾಮೀಣ ಪ್ರದೇಶದ ಅಭಿವೃದ್ಧಿಗಾಗಿ ಮಹತ್ವದ ಪಾತ್ರವನ್ನು ನೀಡಲಾಯಿತು.

**ಮೊದಲ ಪಂಚವಾರ್ಷಿಕ ಯೋಜನೆ (1951–56) :** ಮೊದಲ ಪಂಚವಾರ್ಷಿಕ ಯೋಜನೆಯು 1950–51ರಲ್ಲಿ ಆರಂಭವಾಯಿತು. ಬಡತನ, ಅನಕ್ಷರತೆ, ವೈಜ್ಞಾನಿಕ ಹಿಂದುಳಿದಿರುವಿಕೆ ಇತ್ಯಾದಿಯಿಂದ ಪರಿಸ್ಥಿತಿಯನ್ನು ಸುಧಾರಿಸಿ ಸಮಾನತೆ ಮತ್ತು ಸಾಮಾಜಿಕ ನ್ಯಾಯ ಆಧಾರಿತ ಅಭಿವೃದ್ಧಿಯನ್ನು ಸಾಧಿಸಲು "ಮಿಶ್ರ ಆರ್ಥಿಕ" (Mixed Economy) ಪದ್ಧತಿಯನ್ನು ಅನುಸರಿಸಲಾಯಿತು.

ಇದರಲ್ಲಿ ಖಾಸಗಿ ಮತ್ತು ಸಾರ್ವಜನಿಕ ಎರಡೂ ಕ್ಷೇತ್ರಗಳಿಗೆ ಪ್ರಮುಖ ಪಾತ್ರವನ್ನು ನೀಡಲಾಯಿತು. ಹಾಗೆಯೇ, ಈ ಎರಡೂ ಆರ್ಥಿಕ ಕ್ಷೇತ್ರಗಳಲ್ಲಿರುವ ನ್ಯೂನ್ಯತೆಗಳನ್ನು ಹೋಗಲಾಡಿಸಲು ಸುವರ್ಣ ಮಾಧ್ಯಮವಾದ ಸಹಕಾರ ಕ್ಷೇತ್ರಕ್ಕೆ ಪ್ರಾಮುಖ್ಯತೆಯನ್ನು ನೀಡಲಾಯಿತು. ರಾಷ್ಟ್ರದ ಪ್ರಜಾಸತ್ತಾತ್ಮಕ ಯೋಜಿತ ಆರ್ಥಿಕ ವ್ಯವಸ್ಥೆಯಲ್ಲಿ ಸಹಕಾರವು ಕೈ ಬಿಡಲಾಗದ ಒಂದು ಅಭಿವೃದ್ಧಿಯ ಸಾಧನವಾಗಿ ಪರಿಗಣಿಸಲ್ಪಟ್ಟಿತು.

ಆರ್ಥಿಕ ನೀತಿ, ಯೋಜನೆ ರೂಪಿಸಿದ ತಜ್ಞರು ಸಹಕಾರ ಕ್ಷೇತ್ರಕ್ಕೆ ಆದ್ಯತೆ ನೀಡಿದರು. ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಸಾಮಾಜಿಕ ಉದ್ದೇಶ, ಸಹಕಾರ ಸಂಘಗಳು ಮತ್ತು ಪಂಚಾಯಿತಿಗಳು ನಿಕಟವಾಗಿ ಕೆಲಸ ಮಾಡುವುದು, ಪ್ರತಿ ಒಂದು ಹಳ್ಳಿಯು ಒಂದು ಸಹಕಾರವು ಸಂಘವನ್ನು ಹೊಂದಿ ಸದಸ್ಯರ ವಿವಿಧ ಬೇಡಿಕೆಗಳನ್ನು ಪೂರೈಸುವುದು, ಯೋಜನೆಯ ಅವಧಿಯಲ್ಲಿ ಶೇ.50 ರಷ್ಟು ಹಳ್ಳಿಗಳನ್ನು ಮತ್ತು ಶೇ.30 ರಷ್ಟು ಗ್ರಾಮೀಣ ಜನ ಸಂಖ್ಯೆಯನ್ನು ಸಹಕಾರ ವ್ಯಾಪ್ತಿಗೆ ತರುವುದು, ಸಹಕಾರ ಬೇಸಾಯ, ಸಿಬ್ಬಂದಿ ತರಭೇತಿ, ಸಹಕಾರ ಮಾರಾಟ, ಕೃಷಿಪತ್ತಿನ ಗುರಿ, ಇತ್ಯಾದಿ ಯೋಜನೆಗಳನ್ನು ಅಳವಡಿಸಿಕೊಳ್ಳಲಾಯಿತು.

ಪ್ರತಿ ವರ್ಷ ಕೃಷಿ ಉತ್ಪಾದನೆಗಾಗಿ ಕೊಡುವ ಸಾಲ ರೂ.130.00 ಕೋಟಿಯಷ್ಟು ತಲುಪಬೇಕೆಂದು ಗುರಿ ನಿಗಧಿ ಪಡಿಸಲಾಯಿತು. ರೂ.100.00 ಕೋಟಿ ಅಲ್ಪಾವಧಿ ಸಾಲ, ರೂ.25.00 ಕೋಟಿ ಮಧ್ಯಮವಧಿ ಸಾಲ ಹಾಗೂ ರೂ. 5.00 ಕೋಟಿ ದೀರ್ಘಾವಧಿ ಸಾಲ. ಈ ಗುರಿ ಸಾಧನೆಗಾಗಿ ಪ್ರಯತ್ನಗಳನ್ನು ನಡೆಸಲಾಯಿತು. ಮೊದಲ ಪಂಚವಾರ್ಷಿಕ ಯೋಜನೆಯ ಆರಂಭ ಮತ್ತು ಅಂತ್ಯದ ವೇಳೆಗೆ ಇದ್ದು ಚಿತ್ರಣ ಕೆಳಕಂಡಂತಿದೆ.

| ಕ್ರ.ಸಂ. | ವಿವರಗಳು | 1950–51 | 1955–56 |
|---|---|---|---|
| 01 | ಪ್ರಾಥಮಿಕ ಕೃಷಿ ಪತ್ತಿನ ಸಂಘಗಳು | 1,15,462 | 1,59,939 |
| 02 | ಸದಸ್ಯರು (ಲಕ್ಷಗಳಲ್ಲಿ) | 51.54 | 77.91 |
| 03 | ಸರಾಸರಿ ಸಂಘದ ಸದಸ್ಯತ್ವ | 45 | 49 |
| 04 | ಒಟ್ಟು ಸಾಲ ನೀಡಿದ್ದು (ಕೋಟಿಗಳಲ್ಲಿ) | 22.90 | 50.16 |
| 05 | ಸರಾಸರಿ ಒಬ್ಬ ಸದಸ್ಯನಿಗೆ ನೀಡಿದ ಸಾಲ (ರೂ) | 46 | 64 |
| 06 | ಸರಾಸರಿ ಸಂಘ ಒಂದರ ಷೇರು ಬಂಡವಾಳ (ರೂ) | 727 | 1051 |
| 07 | ಸರಾಸರಿ ದುಡಿಯುವ ಬಂಡವಾಳ (ರೂ) | 3547 | 4946 |

ಮೊದಲ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ನಿರೀಕ್ಷಿತ ಪ್ರಗತಿ ಆಗಲಿಲ್ಲ, ಗುಣಮಟ್ಟ ಸುಧಾರಣೆ ಆಗಲಿಲ್ಲ. ಕೆಲವೇ ಕೆಲವು ಸಂಘಗಳು ಆಡಿಟ್ 'ಎ' ಮತ್ತು 'ಬಿ' ವರ್ಗದಲ್ಲಿ ಇದ್ದು ಉಳಿದ ಬಹುತೇಕ ಸಂಘಗಳು 'ಸಿ' ಅಂದರೆ ನಷ್ಟದ ವರ್ಗದಲ್ಲಿದ್ದವು. ರೈತರು ಪಡೆದಿದ್ದ ಸಾಲದ ಪೈಕಿ ಸಹಕಾರದ ಪಾಲು ಕೇವಲ ಶೇ.3% ರಷ್ಟಿತ್ತು. ಲೇವಾದೇವಿದಾರರು ಮತ್ತು ವ್ಯಾಪಾರಸ್ಥರ ಪಾತ್ರವೇ ಪ್ರಧಾನವಾಗಿತ್ತು. ಈ ಸಹಕಾರ ಸಂಘಗಳ ವ್ಯಾಪ್ತಿಗೆ ರಾಷ್ಟ್ರದ ಜನ ಸಂಖ್ಯೆಯಲ್ಲಿ ಶೇ.7.5 ರಷ್ಟು ಮಾತ್ರ ಒಳಪಟ್ಟಿತು.

**ಅಖಿಲ ಭಾರತ ಗ್ರಾಮೀಣ ಪತ್ತಿನ ಸಮೀಕ್ಷಣ ಸಮಿತಿ (All India Rural Credit Survey Committee) :** ಈ ಸಮಿತಿಯ ವರದಿಯು ಭಾರತದ ಸಹಕಾರ ಚಳವಳಿಯ ಇತಿಹಾಸದಲ್ಲಿ ಒಂದು ಪ್ರಮುಖ ಘಟನೆಯಾಗಿರುತ್ತದೆ. ಬಾರತೀಯ ರಿಸರ್ವ್ ಬ್ಯಾಂಕ್ (RBI) ಎ.ಡಿ.ಗೊರ್‍ವಾಲ (A.D.Gorwala) ಇವರ ಅಧ್ಯಕ್ಷತೆಯಲ್ಲಿ ಈ ಸಮಿತಿಯನ್ನು 1951ರಲ್ಲಿ ನೇಮಿಸಿತು. ಈ ಸಮಿತಿಯು 1954ರಲ್ಲಿ ವರದಿಯನ್ನು ನೀಡಿದ್ದು, ಅದರಲ್ಲಿ "ಸಹಕಾರವು ವಿಫಲವಾಗಿದೆ, ಆದರೆ ಸಹಕಾರವು ಯಶಸ್ವಿ ಆಗಲೇಬೇಕು" (Cooperation has failed but, cooperation must succeed) ಎಂಬುದಾಗಿ ಅಭಿಪ್ರಾಯ ಪಟ್ಟಿರುತ್ತದೆ. ಈ ಸಮಿತಿಯು ಪ್ರಮುಖವಾಗಿ ಗ್ರಾಮೀಣ ಪತ್ತಿನ ಬಗ್ಗೆ ಅಧ್ಯಯನ ಮಾಡಿದ್ದು, ಸಂಗ್ರಹಿಸಿದ ಅಂಕಿ ಅಂಶಗಳನ್ನು ಪ್ಲಾನಿಂಗ್ ಕಮಿಷನ್‌ಗೆ ನೀಡಿದ್ದು, ಸಹಕಾರದ ಅಭಿವೃದ್ಧಿಗಾಗಿ ಯೋಜನೆ ರೂಪಿಸಲು ಬಹಳ ನೆರವಾಗಿರುತ್ತದೆ. ಈ ಸಮಿತಿಯ ಪ್ರಮುಖವಾದ ಶಿಫಾರಸ್ಸುಗಳೆಂದರೆ.

**1) ಸರ್ಕಾರದ ಪಾಲುದಾರಿಕೆ (Government Partnership) :** ಎಲ್ಲಾ ಹಂತದ ಸಂಸ್ಥೆಗಳ ಆರ್ಥಿಕ ಸದೃಢತೆಯನ್ನು ಹೆಚ್ಚಿಸಲು ಸಾಲ ಎತ್ತುವಳಿ ಸಾಮರ್ಥ್ಯವನ್ನು ಹೆಚ್ಚಿಸಲು ಹಾಗೂ ವಿಶ್ವಾಸವನ್ನು ಮೂಡಿಸಲು ಸರ್ಕಾರದಿಂದ ಷೇರು ಬಂಡವಾಳ ರೂಪದಲ್ಲಿ ನೆರವು ನೀಡುವುದರ ಮೂಲಕ ಸರ್ಕಾರದ ಪಾಲುದಾರಿಕೆ ಯೋಜನೆಗೆ ಶಿಫಾರಸ್ಸು.

**2) ದೀರ್ಘಾವದಿ ಅಪರೇಷನ್ ನಿಧಿ (Long-Term operations Fund –LTO) :** ಬಹುತೇಕ ರಾಜ್ಯ ಸರ್ಕಾರಗಳು ಆರ್ಥಿಕ ಮುಗ್ಗಟ್ಟನ್ನು ಎದುರಿಸುತ್ತಿದ್ದರಿಂದ ಅವುಗಳು ಕೃಷಿ ಪತ್ತಿನ ಸಂಘಗಳಿಗೆ ಷೇರು ಬಂಡವಾಳವನ್ನು ನೀಡುವ ಸ್ಥಿತಿಯಲಿರಲಿಲ್ಲ. ಇದರಿಂದಾಗಿ ಆರ್.ಬಿ.ಐ ಹಂತದಲ್ಲಿ "ರಾಷ್ಟ್ರೀಯ ಕೃಷಿ ಪತ್ತಿನ (ದೀರ್ಘಾವಧಿ ಅಪರೇಷನ್ಸ್) ನಿಧಿ" ಯನ್ನು ಸ್ಥಾಪಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡಿರುತ್ತದೆ.

**3) ದೊಡ್ಡ ಪ್ರಮಾಣದ ಸಂಘಗಳ ಸ್ಥಾಪನೆ (Large Sized Credit Cooperatives) :** ಕೃಷಿ ಪತ್ತಿನ ಸಂಘಗಳನ್ನು ಆರ್ಥಿಕವಾಗಿ ಸದೃಢವಾಗುವಂತೆ ಮಾಡಲು ದೊಡ್ಡ ಪ್ರಮಾಣದ ಸಂಘವನ್ನು ಸ್ಥಾಪಿಸಬೇಕೆಂದು ಸಮಿತಿಯು ಸಲಹೆ ನೀಡಿರುತ್ತದೆ. ಅಲ್ಲದೆ ಹಾಲಿ ಇರುವ ಚಿಕ್ಕ ಪತ್ತಿನ ಸಂಘಗಳನ್ನು ಪುನರ್ ವಿಂಗಡಣೆ (reorganization) ಅಥವಾ ಸಂಯೋಜನೆ (amalgmation) ಮಾಡಬೇಕೆಂದು ಹಾಗೂ ಇದರಿಂದ ಸದರಿ ಸಂಘಗಳು ಸದಸ್ಯರ ಸಾಲ ಮತ್ತು ಸಾಲೇತರ ಬೇಡಿಕೆಗಳನ್ನು ಪೂರೈಸಬಲ್ಲವು ಎಂಬುದು ಶಿಫಾರಸ್ಸಾಗಿರುತ್ತದೆ.

**4) ಪತ್ತು ಮತ್ತು ಮಾರಾಟ ಜೋಡಣೆ (Linking of Credit with marketing) :** ಬೆಳೆ ಸಾಲದ ವಸೂಲಾತಿಗಾಗಿ ಮಾರಾಟ ಸಂಘಗಳೊಡನೆ ಜೋಡಣೆಯ ಸಲಹೆ ಇದಾಗಿರುತ್ತದೆ. ಪ್ರಾಥಮಿಕ ಕೃಷಿ ಪತ್ತಿನ ಸಂಘಗಳು ರೈತರಿಗೆ ತಾವು ಬೆಳೆದ ಕೃಷಿ ಉತ್ಪನ್ನಗಳನ್ನು ಮಾರಾಟ ಸಂಘಗಳ ಮೂಲಕ ಮಾರಾಟ ಮಾಡುವ ಷರತ್ತಿಗೆ ಒಳಪಟ್ಟು ಸಾಲ ನೀಡುವುದು. ಮಾರಾಟ ಸಂಘಗಳು ಸಾಲಗಾರ ರೈತರ ಉತ್ಪನ್ನಗಳನ್ನು ಮಾರಾಟ ಮಾಡಿ ಬಂದಂತ ಹಣದಿಂದ ಸಂಬಂಧಪಟ್ಟ ರೈತರ ಸಾಲ ಬಾಬ್ತು ಪತ್ತಿನ ಸಂಘಕ್ಕೆ ಹಣ ಪಾವತಿಸಿ ಉಳಿದಿದ್ದನ್ನು ರೈತರಿಗೆ ನೀಡಬೇಕೆಂಬುದು ಸಮಿತಿಯ ಶಿಫಾರಸ್ಸು ಆಗುತ್ತದೆ.

**5) ಸಿಬ್ಬಂದಿ ತರಬೇತಿ :** ಪ್ರಾಥಮಿಕ, ಜಿಲ್ಲಾ ಹಾಗೂ ರಾಜ್ಯಮಟ್ಟದ ಕೃಷಿ ಪತ್ತಿನ ಸಂಸ್ಥೆಗಳ ಎಲ್ಲಾ ಸಿಬ್ಬಂಧಿಗೆ ಸಹಕಾರ ಶಿಕ್ಷಣ ಮತ್ತು ತರಬೇತಿ ನೀಡಲು ಸಮಿತಿ ಶಿಫಾರಸ್ಸು ಮಾಡಿದೆ.

**6) ಮೇಲ್ವಿಚಾರಣೆ ಮತ್ತು ಲೆಕ್ಕಪರಿಶೋಧನೆ :** ಕೇಂದ್ರ ಹಣಕಾಸು ಸಂಸ್ಥೆಗಳು ಮೇಲ್ವಿಚಾರಣೆ ಮಾಡಬೇಕೆಂದು ಹಾಗೂ ಸರ್ಕಾರವು ಲೆಕ್ಕಪರಿಶೋಧನೆ ನಡೆಸಬೇಕೆಂದು ಶಿಫಾರಸ್ಸು ಮಾಡಲಾಗಿರುತ್ತದೆ.

**7) ವಿಶೇಷ ನಿಧಿಗಳು :** ಸಮಿತಿಯು ಎರಡು ನಿಧಿಗಳನ್ನು ಸ್ಥಾಪಿಸಲು ಸಲಹೆ ನೀಡಿರುತ್ತದೆ. (i) ರಾಷ್ಟ್ರೀಯ ಕೃಷಿ ಪತ್ತಿನ (ಸ್ಥಿರೀಕರಣ) ನಿಧಿ The National Agricultural Credit (Stabilization) Found ಇದನ್ನು ಆರ್.ಬಿ.ಐ ಸ್ಥಾಪಿಸುವುದು ಹಾಗೂ ಬರಗಾಲ ಇತ್ಯಾದಿ ಕಾರಣಗಳಿಂದ ಬೆಳೆ ಸಾಲ ವಸೂಲಾಗದಿದ್ದಾಗ ಅದನ್ನು ಮುಂದೂಡಲು ಈ ನಿಧಿಯಿಂದ ರಾಜ್ಯ ಬ್ಯಾಂಕ್‌ಗಳಿಗೆ ಮಧ್ಯಮಾವಧಿ ಸಾಲ ನೀಡುವುದು. (ii) ರಾಷ್ಟ್ರೀಯ ಕೃಷಿ ಪತ್ತಿನ (ಪರಿಹಾರ ಮತ್ತು ಖಾತರಿ) ನಿಧಿ The National Agricultural Credit (Relief & Guarantee) Found. ಸತತ ಬರಗಾಲ ಇತ್ಯಾದಿ ಪ್ರಕೃತಿ ವಿಕೋಪಗಳಿಂದ ಸಹಕಾರ ಸಾಲ ವಸೂಲಾಗದಿದ್ದಾಗ ಸದರಿ ಸಾಲಗಳನ್ನು ಮನ್ನಾ ಮಾಡಲು ಬಳಸುವುದಕ್ಕಾಗಿ ಈ ನಿಧಿಯನ್ನು ರಾಜ್ಯ ಸರ್ಕಾರ ಸ್ಥಾಪಿಸಬೇಕೆಂಬುದು ಶಿಫಾರಸ್ಸಾಗಿರುತ್ತದೆ. ಸಮಿತಿಯ ಪ್ರಮುಖವಾದ ಮೇಲ್ಕಂಡ ಶಿಫಾರಸ್ಸುಗಳು ಸಹಕಾರ ಚಳವಳಿಯ, ವಿಶೇಷವಾಗಿ ಗ್ರಾಮೀಣ ಕೃಷಿ ಪತ್ತಿನ ವ್ಯವಸ್ಥೆಯ ಸುಧಾರಣೆಗೆ ಬಹಳ ನೆರವಾಗುತ್ತದೆ.

# ಶಿವರಾತ್ರಿ : ಶಿವಾರಾಧಾನೆಯ ಪರ್ವ



ಎನ್.ಆರ್.ಪಾಟೀಲ
ಹಿಂಡಲಗಾ, ಬೆಳಗಾವಿ.

"ಶಿವರಾತ್ರಿ" ಶಿವಾರಾಧನೆಯ ಪರ್ವಗಳಲ್ಲೇ ಪ್ರಮುಖವಾದುದು. ಸನಾತನ ಭಾರತೀಯ ಪರ್ವಾಚರಣೆಗಳಲ್ಲಿ ಶಿವರಾತ್ರಿಯ ಆಚರಣೆಗೆ ತುಂಬ ಮಹತ್ವವಿದೆ. ಶಿವರಾತ್ರಿಯಂದು ಶಿವನ ಧ್ಯಾನ ಮಾಡುವುದರಿಂದ ತಮ್ಮೆಲ್ಲ ಪಾಪಕರ್ಮಗಳು ನಾಶವಾಗಿ ಅನಂತ ಪುಣ್ಯ ಲಭಿಸುತ್ತದೆ ಎಂಬ ನಂಬಿಕೆ ಜನರಲ್ಲಿ ಪ್ರಾಚೀನಕಾಲದಿಂದಲೂ ಉಳಿದುಕೊಂಡು ಬಂದಿದೆ. ಭಕ್ತಿಯಿಂದ ನಂಬಿ ಕರೆದರೆ ಶಿವನು ಬಂದು ನಮ್ಮ ಸಂಕಟಗಳನ್ನೆಲ್ಲ ಪರಿಹರಿಸುತ್ತಾನೆ ಎಂಬ ವಿಶ್ವಾಸ ಭಕ್ತರಲ್ಲಿದೆ. ಭಕ್ತರ ಬದುಕಿನ ರಾತ್ರಿಗಳನ್ನು (ಕಷ್ಟಗಳನ್ನು) ಹಗಲುಗೊಳಿಸುವ (ಕಳೆಯುವ) ಹಬ್ಬವೇ ಶಿವರಾತ್ರಿ. ಅಂದರೆ ಬರಡಾದ ಬದುಕಿನಲ್ಲಿ ಹೊಸ ಆಶಯ–ಹೊಸ ಚೈತನ್ಯ ತರುವುದೇ ಶಿವರಾತ್ರಿ. ಶಿವರಾತ್ರಿಯಲ್ಲಿ "ನಾನು, ನನ್ನದು"ಎಂಬ ಹಮ್ಮು–ಬಿಮ್ಮು ಇಲ್ಲ. ಎಲ್ಲವೂ ಶಿವಾರ್ಪಣೆ. ಉಪವಾಸವಿದ್ದು, ಶಿವನ ಸ್ಮರಣೆಯಲ್ಲಿ ಮೈಮರೆತು, ನಮ್ಮ 'ಅಹಂ'ದ ಕೋಟೆಯನ್ನು ಒಡೆದು ಹಾಕಿ ಶಿವನ ಸಾನಿಧ್ಯ ಸೇರುವುದೇ ಭಕ್ತರ ಅಭಿಲಾಷೆ.

**ಶಿವಸ್ವರೂಪ :** ಶಿವ ಸರ್ವ ಭಕ್ತರ ದೈವ. ಅವನಲ್ಲಿ ಮೇಲು–ಕೀಳು ಭಾವನೆ ಇಲ್ಲ. ಅದರಲ್ಲೂ ಲೋಕ ಕಾಯುವ ತ್ರಿಮೂರ್ತಿಗಳಲ್ಲಿ ಒಬ್ಬನಾದ ಶಿವನು ದರಿದ್ರರ, ಅಲಕ್ಷಿತರ ಭಕ್ತಿಗೆ ಬಹು ಬೇಗ ಒಲಿಯುವ ದೇವರು. ಇದಕ್ಕೊಂದು ಉದಾಹರಣೆ ಎಲಕ್ಕಿ ಹೂವು. ಸರ್ವರಿಗೂ ಸರ್ವದೃಷ್ಟಿಯಿಂದಲೂ ಈ ಹೂವು ತಿರಸ್ಕರಿತ. ಆದರೆ ಶಿವನಿಗೆ ಇದೇ ಹೂವು ಸ್ವೀಕರಿತ. ಅಂದರೆ ತಿರಸ್ಕರಿತವಾದ, ಶೋಷಿತರ ಉಧ್ಧಾರಕ್ಕೆ ಇವನು ಸದಾ ಮುಂದು. ಶಿವನು ಗುಡಿಯಿಂದ ಗುಡಿಸಿಲಿನ ಕಡೆಗೆ ದಿವ್ಯ ದೃಷ್ಟಿ ಹರಿಸುವ ಸರ್ವರ ಆರಾಧ್ಯ ದೈವ. ಎದ್ದವರನ್ನು ಎಬ್ಬಿಸುವುದಕ್ಕಿಂತಲೂ ಬಿದ್ದವರನ್ನು ಎಬ್ಬಿಸುವುದರಲ್ಲೇ ಸಾರ್ಥಕತೆ. ಈ ನಂಬಿಕೆಯ ಭಕ್ತಿಭಾವದ ಹಿನ್ನೆಲೆಯಲ್ಲಿ ಶಿವರಾತ್ರಿ ಒಂದು ದಿನದ ಹಬ್ಬವಲ್ಲ. ಬದುಕಿನ ಕ್ಷಣ ಕ್ಷಣವೂ ಶಿವನ ನೆನೆಹು. ಅದೇ ಶಿವರಾತ್ರಿಯ ನಿರಂತರತೆ. ಶಿವನಸ್ವರೂಪವನ್ನು ಬಣ್ಣಿಸುತ್ತ ಜನಪದ ಗೃಹಿಣಿಯೊಬ್ಬಳು ಹೀಗೆ ಹಾಡುತ್ತಾಳೆ–

ಹೂವಿನ್ಯಾಗ ಹುದುಗ್ಯಾನ।ಮಾಲ್ಯಾಗ ಮಲಗ್ಯಾನ
ಮೊಗ್ಯಾಗ ಕಣ್ಣು ತೆರೆದಾನ। ಲಿಂಗಯ್ಯನ
ನೊಡಟಿಗೆ ನಿದ್ದೆ ಬಯಲಾಗಿ॥

ಶಿವಕಲ್ಪನೆಗೆ ಅತ್ಯಂತ ಪ್ರಾಚೀನ ಇತಿಹಾಸವಿದೆ. ಈ ಜಗದ ಉತ್ಪತ್ತಿಗೆ ಶಿವನೇ ಆದಿ–ಅಂತ್ಯ ಎಂಬುದು ಭಕ್ತರ ಬಲವಾದ ನಂಬಿಕೆ. ಅಂದರೆ ಶಿವ ಕಲ್ಪನೆ ಮನುಕುಲದಾರಂಭದಿಂದಲೂ ಇದೆ ಎಂದೇ ಅರ್ಥ. ಇದಕ್ಕೆ ಪೂರಕವಾಗಿ ವೇದ–ವೇದಾಂಗಗಳಲ್ಲೂ ಶಿವನ ಬಗೆಗೆ ಸಾಕಷ್ಟು ವಿವರಣೆಗಳು ದೊರೆಯುತ್ತವೆ. ಒಂದು ವಿಶ್ಲೇಷಣೆಯ ಪ್ರಕಾರ ಋಗ್ವೇದದ ರುದ್ರನೇ ಪುರಾಣ ಕಾಲದ ಶಿವ ಎನ್ನಲಾಗಿದೆ. ಋಗ್ವೇದದ ಕೊನೆಯ ಭಾಗವಾದ "ಪುರುಷಸೂಕ್ತ"ದಲ್ಲಿ ಪರಶಿವನ ಸ್ವರೂಪದ ಬಗೆಗೆ ವರ್ಣನೆಗಳಿವೆ. "ಶಿವನು ಪುರುಷ ಹಾಗೂ ಶಕ್ತಿಯ ಸಂಗಮ." ಎಂದು ಹೇಳಲಾಗಿದೆ. ವೇದ–ವೇದಾಂಗಗಳ ಪ್ರಕಾರ–"ಪುರುಷ–ಶಕ್ತಿಗಳ ಸಮ್ಮಿಲನವೇ ಸೃಷ್ಠಿ." ಇಲ್ಲಿ ಪುರುಷ ಶಿವನಾದರೆ ಶಕ್ತಿ ಪಾರ್ವತಿ. ಅದಕ್ಕಾಗಿಯೇ ಶಿವನು ಅರ್ಧನಾರೀಶ್ವರ! ಇದು ನಮ್ಮ ಪುರಾತನರು ಸ್ತ್ರೀ–ಪುರುಷರನ್ನು ಸಮಾನವಾಗಿ ಕಾಣುವ ಉದಾತ್ತ ಕಲ್ಪನೆ.

**ಶಿವ–ಶಕ್ತಿಯ ಸಂಗಮ**

ಸೃಷ್ಟಿ–ಲಯಗಳೆರಡರಲ್ಲೂ ಅಪಾರ ಸಾಮರ್ಥ್ಯ ಹೊಂದಿದ್ದ ರುದ್ರನು ಕಾಲಕ್ರಮದಲ್ಲಿ ರೌದ್ರತೆಯೊಂದಿಗೆ ಮೃದುತ್ವ ಗುಣಗಳೆರಡನ್ನು ಸಂಗಮಿಸಿಕೊಂಡು ಶಿವನಾಗಿ ಪರಿವರ್ತನೆಗೊಂಡು ಪೂಜನೀಯ ಮಹಾದೇವನಾಗಿ ಬೆಳೆದ ಎನ್ನುತ್ತಾರೆ ವಿದ್ವಾಂಸರು. ಮುಂದೆ

ರುದ್ರನೇ ಮಂಗಳಕರನಾದ ದೇವನಾಗಿ ಅಂದು-ಇಂದಿಗೂ ಈಶ್ವರ, ಪರಮೇಶ್ವರ, ನಟರಾಜ, ಶಂಕರ, ನೀಲಕಂಠ, ಮಂಜುನಾಥ, ವಿಶ್ವೇಶ್ವರ, ಅಮೃತೇಶ್ವರ, ಅಖಿಲೇಶ್ವರ, ಓಂಕಾರೇಶ್ವರ... ಇನ್ನೂ ಅನೇಕ ಹೆಸರುಗಳಿಂದ ಪೂಜಿಸಲ್ಪಡುತ್ತಿದ್ದಾನೆ. ಶಿವನು ಎಲ್ಲ ಜನಾಂಗಗಳ, ಎಲ್ಲ ಪಂಗಡಗಳ ಪರಮದೈವ. ಮಹದೇಶ್ವರ, ಮೈಲಾರಲಿಂಗ, ಕಾಲಭೈರವ – ಮುಂತಾದ ಹೆಸರುಗಳಿಂದಲೂ ಶಿವನು ಆರಾಧಿಸಲ್ಪಡುತ್ತಿದ್ದಾನೆ. ನಮ್ಮ ಪವಿತ್ರ ಗ್ರಂಥ ಭಗವದ್ಗೀತೆಯಲ್ಲೂ "ಪರಮಾತ್ಮ ಪರಂಜ್ಯೋತಿ ಶಿವ ತಂದೆ" ಎಂಬ ಗುಣಗಾನವಿದೆ. 12ನೇ ಶತಮಾನದ ಶರಣರಂತೂ ಶಿವನನ್ನು ತಮ್ಮ ಆರಾಧ್ಯ ದೇವನನ್ನಾಗಿರಿಸಿಕೊಂಡು ಮನಸಾರೆ ಆರಾಧಿಸಿದ್ದಾರೆ. "ಶರಣ ಸತಿ ಲಿಂಗ ಪತಿ" ಎಂಬ ಕಲ್ಪನೆಯಲ್ಲಿ ತಮ್ಮನ್ನು ಪರಿಪೂರ್ಣವಾಗಿ ಶಿವನಿಗೆ ಅರ್ಪಿಸಿಕೊಂಡಿದ್ದರು. ಅಕ್ಕ ಮಹಾದೇವಿ ಶಿವ(ಮಲ್ಲಿಕಾರ್ಜುನ)ನನ್ನು ತನ್ನ ಪತಿಯನ್ನಾಗಿ ಸ್ವೀಕರಿಸಿ ಜೀವನ ಪರ್ಯಂತ ಅವನ ಸ್ಮರಣೆಯಲ್ಲೇ ಕಾಲಕಳೆದ ಮಹಾ ಶರಣೆ ತನ್ನ ಆರಾಧ್ಯ ದೈವ ಶಿವಸ್ವರೂಪವನ್ನು ಕುರಿತು ಅಕ್ಕ ಹೇಳುತ್ತಾಳೆ–

**"ಕಂಗೊಳಗೆ ತೊಳಗಿ ಬೆಳಗುವ ದಿವ್ಯ**
**ರೂಪವ ಕಂಡು ಮೈಮರೆದೆನವ್ವಾ!**
**ಮಣಿ ಮುಕುಟದ ಫಣಿ ಕಂಕಣದ ನಗೆಮೊಗದ**
**ಸುಲಿಪಲ್ಲ ಸೊಬಗನ ಕಂಡು ಮನಸೋತೆನವ್ವಾ!**
**ಇಂತಾಗಿ ಚನ್ನಮಲ್ಲಿಕಾರ್ಜುನನೆನ್ನ ಮದುವಣಿಗ ಆನು**
**ಮದುವಣಿಗಿ ಕೇಳಾ ತಾಯೇ!"**

ಶಿವನು ಭಕ್ತ ರಕ್ಷಕ. ಭಕ್ತರು ಕೇಳಿದ ವರಗಳನ್ನು ಹಿಂದೆ-ಮುಂದೆ ನೋಡದೇ ಕೊಟ್ಟು ಬಿಡುತ್ತಾನೆ. ಎಷ್ಟೋ ಸಾರಿ ತಾನು ಭಕ್ತರಿಗೆ ನೀಡಿದ ವರಗಳಿಂದ ತಾನೇ ತಾನೆ ಕಷ್ಟಕ್ಕಿಡಾದ ಪ್ರಸಂಗಗಳಿವೆ. ಬಸ್ಮಾಸೂರನು ಶಿವನಿಂದ ಪಡೆದ ವರವನ್ನು ಶಿವನ ಮೇಲೇ ಪ್ರಯೋಗಿಸಲು ಮುಂದಾದುದು ಇಲ್ಲಿ ಸ್ಮರಣಾರ್ಹ. ಶಿವನು ಸದಾ ಭಕ್ತಪರ ಎಂಬುದು ಮಾತ್ರ ಸತ್ಯ. ಅದಕ್ಕೇ ಭಕ್ತರು ಹೇಳುತ್ತಾರೆ–"ಶಿವ ಶಿವ ಎಂದರೆ ಭಯವಿಲ್ಲಾ"

**ಆಚರಣೆ :** ಶಿವರಾತ್ರಿಯು ಭಕ್ತಿ-ಜ್ಞಾನ ಸಂಗಮಗಳ ದಿವ್ಯರಾತ್ರಿ. ಅಂದು ಇಡೀ ರಾತ್ರಿ ಶಿವ ಮಂದಿರಗಳಲ್ಲಿ ಪೂಜೆ, ಪುಷ್ಪಾರ್ಚನೆ, ಅಭಿಷೇಕಗಳು ನಿರಂತರ ನಡೆಯುತ್ತವೆ. ಹನ್ನೊಂದು ಸಲ ಭಕ್ತಿಬಾವದಿಂದ ರುದ್ರಾಭಿಷೇಕ ಮಾಡುತ್ತಾರೆ. 101 ಇಲ್ಲವೆ 1001 ಬಿಲ್ವಪತ್ರೆಗಳನ್ನು ಪಂಚಾಕ್ಷರಿ ಮಂತ್ರ ಪಠನದೊಂದಿಗೆ ಶಿವನಿಗೆ ಅರ್ಪಿಸುತ್ತಾರೆ. "ಓಂ ನಮಃ ಶಿವಾಯಃ" ಮಂತ್ರಘೋಷದೊಂದಿಗೆ ಶಿವಲಿಂಗಕ್ಕೆ ಹೂ-ಪತ್ರೆ ಸಲ್ಲಿಸುತ್ತ ಭಕ್ತರು ವಂದಿಸುತ್ತಿರುವ ದೃಶ್ಯ ಎಂಥಹ ನಾಸ್ತಿಕರನ್ನೂ ಆಸ್ತಿಕರನ್ನಾಗಿಸುತ್ತದೆ.

ಮಹಾದೇವನ ಈ ಮಹೋತ್ಸವ ರಾತ್ರಿಯಲ್ಲೇಕೆ ಆಚರಣೆಗೊಳ್ಳುತ್ತದೆ ಎಂಬುದಕ್ಕೆ ಪುರಾಣದಲ್ಲಿ ಒಂದು ವಿವರಣೆಯಿದೆ–ದೇವ-ದಾನವರು ಅಮೃತಕ್ಕಾಗಿ ಸಮುದ್ರವನ್ನು ಮಥನ ಮಾಡುವಾಗ ಮೊದಲು ಹಾಲಾಹಲ(ವಿಷ) ಹೊರಬಂದು ಸರ್ವ ಜೀವಜಂತುಗಳಿಗೆ ಕಂಟಕವಾಗ ತೊಡಗಿದಾಗ, ಶಿವನು ತನ್ನ ಜೀವವನ್ನು ಲೆಕ್ಕಿಸದೇ ಆ ವಿಷವನ್ನು ಕುಡಿದು ಬಿಡುತ್ತಾನೆ. ಅದನ್ನು ಗಮನಿಸಿದ ಪಾರ್ವತಿ ಪತಿಯ ಪ್ರಾಣ ಉಳಿಸಲು ತನ್ನೆರಡೂ ಕೈಗಳಿಂದ ಶಿವನ ಕಂಠವನ್ನು ಹಿಡಿದು ವಿಷವನ್ನು ಗಂಟಲಲ್ಲೇ ನಿಲ್ಲಿಸಿದಳು. ವಿಷದಿಂದ ಬಸವಳಿದ ಶಿವನ ಶಕ್ತಿಯನ್ನು ಹೆಚ್ಚಿಸಲು ಅಂದು ರಾತ್ರಿ ಎಲ್ಲ ದೇವತೆಗಳು ಶಿವನ ಹತ್ತಿರವೇ ಇದ್ದು, ಶಿವನನ್ನು ಕೊಂಡಾಡುತ್ತ ಅವನಿಗೆ ಬಲ ನೀಡಿದರು. ಹೀಗೆ ಜಗಕ್ಕೆರಗಿದ ಕಂಟಕವನ್ನು ಶಿವನು ವಿಷದಿಂದ ಬಸವಳಿದ ಶಿವನ ಶಕ್ತಿಯನ್ನು ಹೆಚ್ಚಿಸಲು ಅಂದು ರಾತ್ರಿ ಎಲ್ಲ ದೇವತೆಗಳು ಶಿವನ ಹತ್ತಿರವೇ ಇದ್ದು, ಶಿವನ್ನು ಕೊಂಡಾಡುತ್ತ ಅವನಿಗೆ ಬಲ ನೀಡಿದರು. ಹೀಗೆ ಜಗಕ್ಕೆರಗಿದ ಕಂಟಕವನ್ನು ಶಿವನು ಪರಿಹರಿಸಿದ್ದು ಹಾಗೂ ಅದರ ಕೃತಜ್ಞತೆಗಾಗಿ ದೇವತೆಗಳು ಆ ರಾತ್ರಿಯನ್ನು ಶಿವನೊಂದಿಗೆ ಕಳೆದುದರ ಪ್ರತೀಕವೇ ಶಿವರಾತ್ರಿ.

ಶಿವರಾತ್ರಿ ಬಹು ಹಿಂದಿನಿಂದಲೂ ಜನಪ್ರಿಯ ಆಚರಣೆ ಆಗಿ ಉಳಿದುಕೊಂಡು ಬಂದಿದೆ ಎಂಬುದಕ್ಕೆ ಅನೇಕ ಶಾಸನಗಳಲ್ಲಿರುವ ಶಿವರಾತ್ರಿ ಉತ್ಸವದ ಉಲ್ಲೇಖಗಳೇ ಸಾಕ್ಷಿ. ಅನೇಕ ಶಾಸನಗಳು "ಶಿವರಾತ್ರಿ ಪರ್ವ" ಎಂದು ಹೇಳಿದ್ದು, ಶಿವಾರಾಧನೆಯ ವಿವರಣೆ ನೀಡಿವೆ. ಶಾಸನವೊಂದು ಹೀಗೆ ಹೇಳುತ್ತದೆ–"ಶಿವಲಿಂಗವಂ ಪ್ರತಿಷ್ಠಿಸಿದವಂ ಶಿವನೇ ಅಕ್ಕುಂ" ಅಂದರೆ ಯಾರು ಶಿವಲಿಂಗವನ್ನು ಶಾಸ್ತ್ರೋಕ್ತವಾಗಿ ಪ್ರತಿಷ್ಠಾಪಿಸಿ ಪೂಜಿಸುವರೋ ಅವರು ಸಾಕ್ಷಾತ್ ಶಿವಸ್ವರೂಪ ಉಳ್ಳವರಾಗುತ್ತಾರೆ ಎಂದರ್ಥ. ಶಿವರಾತ್ರಿಯಂದು ದಾನದತ್ತಿಗಳನ್ನು ನೀಡಲು ಶುಭದಿನವೆಂದು ನಂಬಲಾಗಿದ್ದು, ಅನೇಕ ರಾಜ-ಮಹಾರಾಜರುಗಳು ಶಿವರಾತ್ರಿ ದಿನದಂದು ದಾನದತ್ತಿಗಳನ್ನು ನೀಡಿದ ವಿವರ ಅನೇಕ ಶಾಸನಗಳಲ್ಲಿದೆ. ಶಿವರಾತ್ರಿಯಂದು ಶಿವನ ಕೈಲಾಸದ ಭಾಗಿಲು ಭಕ್ತರಿಗಾಗಿ ತೆರೆದಿರುತ್ತದೆ ಎಂಬ ನಂಬಿಕೆ ಇದೆ.

ಶಿವರಾತ್ರಿಯಂದು ಶಿವಮಂದಿರಕ್ಕೆ ಹೋಗಿ ದರ್ಶನ ಪಡೆದ ನಂತರವೇ ಹಣ್ಣು-ಹಂಪಲ, ಲಘು ಉಪಹಾರ ಸೇವಿಸುತ್ತಾರೆ. ಶಿವಾಲಯಕ್ಕೆ ನೀವು ಹೋದಾಗ ನಿಮಗೆ ಮೊದಲ ದರ್ಶನಕ್ಕೆ ಸಿಗುವುದು ನಂದಿ. ನಂದಿಗೂ ಶಿವನಿಗೂ ಬಿಡದ ಸಖ್ಯ. ಶಿವನು ಪಶುಪಾಲಕನಾಗಿದ್ದು, ಅವನು ಪಶುಪತಿ ಆಗಿದ್ದಾನೆ ಎಂಬುದರ ಸಂಕೇತವೇ ಈ ನಂದಿ. ನಂದಿಯ ನಾಲ್ಕು ಕಾಲುಗಳು ಸತ್ಯ, ಧರ್ಮ, ದಯೆ ಮತ್ತು ಭಕ್ತಿಯನ್ನು ಸೂಚಿಸುತ್ತವೆ ಎಂದು ನಂಬಲಾಗಿದೆ. ಮನುಷ್ಯನು ಈ ಗುಣಗಳನ್ನು ಅಳವಡಿಸಿಕೊಂಡು, ಶಿವರಾತ್ರಿಯಂದು ನಂದಿಯ ಕೋಡುಗಳ ಸಂಧಿಯಿಂದ ಶಿವನ ದರ್ಶನ ಪಡೆಯಬೇಕು ಎಂದು ಬಲ್ಲವರು ಹೇಳುತ್ತಾರೆ. ಅನೇಕ ಕಡೆ ಶಿವರಾತ್ರಿಯಂದೇ ರಥೋತ್ಸವಗಳು ನಡೆಯುತ್ತವೆ. ಬನ್ನಿ, ಶಿವರಾತ್ರಿಯಂದು ಶಿವನ ದರ್ಶನ ಪಡೆದು ಧನ್ಯರಾಗೋಣ. ಆನಪದ ಭಕ್ತಳ ಈ ಹಾಡು ಕೇಳುತ್ತ ಶಿವದ್ಯಾನದಲ್ಲಿ ತೊಡಗೋಣ–

**ಎದ್ದೂನೆ ನಿಮಧ್ಯಾನ ಏಳುತಲೇ ನಿಮಧ್ಯಾನ ।**
**ಸಿದ್ಧರ ದ್ಯಾನ ಶಿವಧ್ಯಾನ । ಮಾಶಿವನೆ**
**ನಿದ್ದೆಗಣ್ಣಾಗೆ ನಿಮ ಧ್ಯಾನ ॥**

## SAHAKARA VARTHA PATRIKE
## Form IV (See rule-8)

| | | | |
|---|---|---|---|
| 1. | Place of Publication | : | Bangalore, Karnataka |
| 2. | Periodicity of its Publications | : | Monthly |
| 3. | Printers Name | : | Biligiri Printers |
| | Whether Citizen of India | | Yes |
| | If foreigner, State the country of origin | | No.138, 2nd main, 8th cross, |
| | Address | | Chamaraj pet, Bangalore-560018 |
| 4. | Editors Name | : | K S Guruprasad |
| | Whether Citizen of India | | Yes |
| | If foreigner, State the country of | | No.16, 1st floor, 1st cross, |
| | origin Address | | Link Road, Malleshwaram, |
| | | | Bangalore-560003 |
| 5. | Name and Address of Individuals who own | : | Karnataka state co operative |
| | The Newspaper and partners or share | : | credit societies Federation Ltd., |
| | holders holding more than percent | | No.16, 1st floor, 1st cross, Link Road, |
| | of the total capital | | Malleshwaram, Bangalore-560003 |

I **K.S. Guruprasad** here by declare that the particulars given are true to the best of my knowledge

Sd/-

Bangalore — **K.S. Guruprasad**

15th, February 2021 — **Signature of the Publisher / Editor**




ಪತ್ತಿನ ಮಹಾಮಂಡಳದ ಉಪಾಧ್ಯಕ್ಷರಾದ ಡಾ.ಬಿ.ಡಿ.ಭೂಕಾಂತರವರನ್ನು ಸಹಕಾರಿ ಕ್ಷೇತ್ರದಲ್ಲಿನ ಸಾಧನೆಯನ್ನು ಗುರುತಿಸಿ "ರಾಷ್ಟ್ರೀಯ ಸಹಕಾರಿ ರತ್ನ" ಪ್ರಶಸ್ತಿಯನ್ನು ಭಾರತ ರತ್ನ ಸರ್.ಎಂ.ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಪ್ರತಿಷ್ಠಾನ ಟ್ರಸ್ಟ್ (ರಿ) ಬೆಂಗಳೂರು ವತಿಯಿಂದ ನೀಡಿ ಸನ್ಮಾನಿಸಲಾಯಿತು.

# ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘ ಬೆಂದೂರ್‌ವೆಲ್ ಶಾಖೆಯ 9ನೇ ವಾರ್ಷಿಕೋತ್ಸವ




ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘ (ನಿ.) ಬೆಂದೂರ್‌ವೆಲ್, ಮಂಗಳೂರು ಇದರ 9ನೇ ವಾರ್ಷಿಕೋತ್ಸವ, ಗ್ರಾಹಕರ ಸಭೆ, ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಸಂಘದ ಸದಸ್ಯರಿಗೆ ಹಾಗೂ ಸಿಬ್ಬಂದಿಗಳಿಗೆ ಗೌರವಾರ್ಪಣೆ ಕಾರ್ಯಕ್ರಮವು ಸಂಘದ ಅಧ್ಯಕ್ಷರಾದ ಶ್ರೀ ಚಿತ್ತರಂಜನ್ ಬೋಳಾರ್ ರವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ಜರುಗಿತು.

ಸಂಘದ ಸದಸ್ಯರುಗಳಾದ ಶ್ರೀ ದಿವಾಕರ್ ವಿ. , ಶ್ರೀ ಗಣೇಶ್ ಸನಿಲ್, ಶ್ರೀ ಯಶವಂತ, ಶ್ರೀ ಲಕ್ಷ್ಮೀ ನಾರಾಯಣ್ ಹಾಗೂ ಶ್ರೀಮತಿ ದೇವಕಿ ಉಳ್ಳಾಲ್ ಇವರುಗಳು ದ್ವೀಪ ಪ್ರಜ್ವಲನೆ ಮಾಡುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಶಾಖೆಗಳ ವಿವಿಧ ಸೇವೆಯ ಪ್ರಗತಿಗೆ ಕಾರಣಕರ್ತರಾದ ಶಾಖೆಯ ಶಾಖಾಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರನ್ನು ಗೌರವಿಸಲಾಯಿತು.

ಸಂಘದ ಉಪಾಧ್ಯಕ್ಷರಾದ ಶ್ರೀ ನೇಮಿರಾಜ್ ಪಿ. ಹಾಗೂ ನಿರ್ದೇಶಕರುಗಳಾದ ಶ್ರೀ ರಾಮ್‌ದಾಸ್ ಮರೋಳಿ, ಶ್ರೀ ಆನಂದ ಎಸ್ ಕೊಂಡಾಣ, ಶ್ರೀ ಸುರೇಶ್ ವಿ. ಪೂಜಾರಿ, ಶ್ರೀ ಸೀತಾರಾಮ್ ಎನ್., ಶ್ರೀ ರಮಾನಾಥ ಸನಿಲ್, ಶ್ರೀ ಚಂದ್ರಹಾಸ ಮರೋಳಿ, ಶ್ರೀಮತಿ ಸುಜಯ ಹೇಮಚಂದ್ರ ಮತ್ತು ಶ್ರೀಮತಿ ಕುಶಲಾಕ್ಷಿ ಯಶವಂತ್ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಸೌಮ್ಯ ವಿಜಯ್, ಸಂಘದ ಸಲಹಾ ಸಮಿತಿಯ ಸದಸ್ಯರು ಹಾಗೂ ಸಿಬ್ಬಂದಿವರ್ಗ ಉಪಸ್ಥಿತರಿದ್ದರು.



ಕರ್ನಾಟಕ ಸರ್ಕಾರದಿಂದ ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ನಿಯಮಿತ ಇದರ ಸದಸ್ಯರಾಗಿ ನೇಮಕಗೊಂಡ ಪತ್ತಿನ ಮಹಾಮಂಡಳದ ನಿರ್ದೇಶಕರಾದ ಶ್ರೀ ವಿ.ರಾಜುರವರನ್ನು ಆಡಳಿತ ಮಂಡಳಿ ಸದಸ್ಯರು ಸನ್ಮಾನಿಸಿ ಗೌರವಿಸಿದರು.



ಮಹಾಕೋಟೇಶ್ವರ ಪತ್ತಿನ ಸಹಕಾರ ಸಂಘ ನಿ., ಬಾದಾಮಿ ಬಾಗಲಕೋಟೆ ಇದರ ಅಧ್ಯಕ್ಷರಾಗಿ ಪುನರಾಯ್ಕೆಯಾದ ಪತ್ತಿನ ಮಹಾಮಂಡಳದ ನಿರ್ದೇಶಕರಾದ ಶ್ರೀ ಹೊನ್ನಯ್ಯ ವಿ ಹಿರೇಮಠ ರವರನ್ನು ಗೌರವಿಸಿ ಸನ್ಮಾನಿಸಲಾಯಿತು.

# ಸ್ಪರ್ಧಾತ್ಮಕ ಸಹಕಾರಿ ಪ್ರಶ್ನೋತ್ತರಗಳು – ಓದಿ ಉತ್ತರಿಸಿ

**1. ಸಹಕಾರ ಸಂಘಗಳಲ್ಲಿ ವಿಶೇಷ ಮಹಾಸಭೆಯನ್ನು ಸದಸ್ಯರ ____ ಕೋರಿಕೆ ಮೇರೆಗೆ ಕರೆಯಲಾಗುತ್ತದೆ.**

ಎ) ಒಟ್ಟು ಸದಸ್ಯರ 1/10 ರಷ್ಟು

ಬಿ) ಒಟ್ಟು ಸದಸ್ಯರ 1/5 ರಷ್ಟು

ಸಿ) ಒಟ್ಟು ಸದಸ್ಯರ 1/4 ರಷ್ಟು

ಡಿ) ಮೇಲಿನ ಯಾವುದು ಅಲ್ಲ

**2. ಸಹಕಾರ ಸಂಘದ ಆಡಳಿತ ಮಂಡಳಿ ಸಭೆ ಅಧ್ಯಕ್ಷತೆಯನ್ನು ಅಧ್ಯಕ್ಷರ ಗೈರು ಹಾಜರಿಯಲ್ಲಿ ____ ವಹಿಸುವರು.**

ಎ) ಆಡಳಿತ ಮಂಡಳಿ ನಿರ್ದೇಶಕರು

ಬಿ) ಉಪಾಧ್ಯಕ್ಷರು

ಸಿ) ಮುಖ್ಯಕಾರ್ಯನಿರ್ವಾಹಕರು

ಡಿ) ಆಡಳಿತ ಮಂಡಳಿಯ ಹಿರಿಯ ನಿರ್ದೇಶಕರು

**3. ಸಹಕಾರ ಸಂಘದಲ್ಲಿ ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಪದಾಧಿಕಾರಿಗಳು ತಮ್ಮ ರಾಜೀನಾಮೆ ಪತ್ರವನ್ನು ____ ರವರಿಗೆ ವಿಳಾಸಿಸಿ, ಸಲ್ಲಿಸಬೇಕಾಗಿರುತ್ತದೆ.**

ಎ) ಸಹಕಾರ ಸಂಘಗಳ ನಿಬಂಧಕರು

ಬಿ) ಸಂಘದ ಅಧ್ಯಕ್ಷರು

ಸಿ) ಮುಖ್ಯ ಕಾರ್ಯನಿರ್ವಾಹಕರು

ಡಿ) ಸಂಘದ ಉಪಾಧ್ಯಕ್ಷರು

**4. ಆಡಳಿತ ಮಂಡಳಿಯ ಸದಸ್ಯತ್ವಕ್ಕೆ ಅನರ್ಹತೆಗಳು**

ಎ) ಸಹಕಾರ ಸಂಘಕ್ಕೆ ಅಥವಾ ಇತರೆ ಯಾವುದೇ ಸಹಕಾರ ಸಂಘಕ್ಕೆ ಸುಸ್ತಿಗಾರನಾಗಿದ್ದರೆ

ಬಿ) ಅಂತ ಸಹಕಾರ ಸಂಘದ ವೇತನ ಪಡೆಯುವ ನೌಕರನ ಹತ್ತಿರದ ಸಂಬಂಧಿಯಾಗಿದ್ದರೆ

ಸಿ) ಅವನು ಗೈರುಹಾಜರಾಗಲು ಅನುಮತಿ ಪಡೆಯದೆ ಅಂತ ಸಂಘದ ಆಡಳಿತ ಮಂಡಳಿಯ ಮೂರು ನಿರಂತರ ಸಭೆಗಳಿಗೆ ಗೈರು ಹಾಜರಾದರೆ.

ಡಿ) ಮೇಲಿನ ಎಲ್ಲವು

**5. ಆಡಳಿತ ಮಂಡಲಿಯಲ್ಲಿ ನಿರ್ದೇಶಕರ ಸ್ಥಾನವು ಆಕಸ್ಮಿಕವಾಗಿ ಖಾಲಿ ಬೀಳಲು ಕಾರಣ____**

ಎ) ರಾಜಿನಾಮೆ

ಬಿ) ಮರಣ

ಸಿ) ಅನರ್ಹತೆ

ಡಿ) ಮೇಲಿನ ಎಲ್ಲವು

**6. ಪ್ರತಿಯೊಂದು ಸಹಕಾರ ಸಂಘದಲ್ಲಿ ____ ಮುಖ್ಯಕಾರ್ಯ ನಿರ್ವಾಹಕರಿರುತ್ತಾರೆ.**

ಎ) ಇಬ್ಬರು ಮುಖ್ಯ ಕಾರ್ಯನಿರ್ವಾಹಕರು

ಬಿ) ಒಬ್ಬ ಮುಖ್ಯ ಕಾರ್ಯನಿರ್ವಾಹಕರು

ಸಿ) ಒಂದಕ್ಕಿಂತ ಹೆಚ್ಚು ಮುಖ್ಯ ಕಾರ್ಯನಿರ್ವಾಹಕರು

ಡಿ) ಹೆಚ್ಚಿನ ಸಂಖ್ಯೆಯ ಮುಖ್ಯ ಕಾರ್ಯನಿರ್ವಾಹಕರು

**7. ಪದಾಧಿಕಾರಿಗಳ ವಿರುದ್ಧದ ಅವಿಶ್ವಾಸ ಗೊತ್ತುವಳಿಯು ಸಹಕಾರ ಸಂಘಗಳ ಕಾಯ್ದೆ 1959ರ ಕಲಂ ––––ಗೆ ಸಂಬಂಧಿಸಿರುತ್ತದೆ.**

ಎ) ಕಲಂ 29

ಬಿ) ಕಲಂ 29 ಎಫ್

ಸಿ) ಕಲಂ 29 ಹೆಚ್

ಡಿ) ಮೇಲಿನ ಯಾವುದು ಅಲ್ಲ

**8. ಸಹಕಾರ ಸಂಘಗಳ ನಿಬಂಧಕರು, ಸಹಕಾರ ಸಂಘಗಳಿಗೆ ಈ ____ ಕಾರಣಕ್ಕೋಸ್ಕರ ವಿಶೇಷಾಧಿಕಾರಿಯನ್ನು ನೇಮಿಸುತ್ತಾರೆ.**

ಎ) ಮಂಡಲಿಯ ರಚನೆಯಲ್ಲಿ ಅಥವ ಕಾರ್ಯನಿರ್ವಹಣೆಯಲ್ಲಿ ಇಕ್ಕಟ್ಟಿನ ಸ್ಥಿತಿ ಇದೆ

ಬಿ) ಗಂಭೀರ ಸ್ವರೂಪದ ಹಣಕಾಸು ಅಕ್ರಮಗಳು ನಡೆಸಿರುವುದರಿಂದ

ಸಿ) ಮಂಡಲಿಯ ಸದಸ್ಯರ ಸಂಖ್ಯೆಯು ಕೋರಂ ಆಗಲು ಅಗತ್ಯವಿರುವ ಸಂಖ್ಯೆಗಿಂತ ಕಡಿಮೆ ಇರುವುದರಿಂದ

ಡಿ) ಮೇಲಿನ ಎಲ್ಲವು

**9. ಸಹಕಾರ ಸಂಘಗಳ ಕಾಯ್ದೆ 1959 ಕಲಂ ––– ರಡಿಯಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ನಿರ್ದೇಶನ ನೀಡಲು ಅಧಿಕಾರವಿರುತ್ತದೆ.**

ಎ) ಕಲಂ 30

ಬಿ) ಕಲಂ 31

ಸಿ) ಕಲಂ 30ಬಿ

ಡಿ) ಕಲಂ 31ಎ

**10. ಸಹಕಾರ ಸಂಘಗಳ ಚುನಾವಣೆಗೆ ಸಂಬಂಧಿಸಿದ ಕಾಯ್ದೆಯ ಕಲಂ ____**

ಎ) ಕಲಂ 38

ಬಿ) ಕಲಂ 39

ಸಿ) ಕಲಂ 39ಎ

ಡಿ) ಕಲಂ 39ಎಎ

**ಹಿಂದಿನ ಸಂಚಿಕೆಯ ಪ್ರಶ್ನೆಗಳಿಗೆ ಉತ್ತರಗಳು :**

**1 - A, 2 -C , 3 –B , 4 –C , 5 –C , 6 –D , 7 –D , 8 – A, 9 –C, 10 –C**